# ಶ್ರೀ ಅರವಿಂದರನ್ನು ನೆನಪಿಸಿಕೊಳ್ಳುವುದು



ಅಖಿಲ ಭಾರತ ಪತ್ರಿಕೆ

ಆಗಸ್ಟ್ 2015

ಬೆಲೆ : 15/–



*The nobility of a being is measured by its capacity of gratitude.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಶ್ರೀ ಅರವಿಂದರನ್ನು ನೆನಪಿಸಿಕೊಳ್ಳುವುದು"

**ಶ್ರೀ ಅರವಿಂದರನ್ನು ಕುರಿತು ಶ್ರೀ ಮಾತೆಯವರ ನುಡಿಗಳು**


**ಅನು : ಡಾ. ಕೆ.ಎಸ್. ಆಮೂರ**
ಕೆಲವು ನೆನಪುಗಳು 3

**ಅನು : ಶ್ರೀ ಪುರುಷೋತ್ತಮ ಗಲಗಲಿ**
ದೈವೀ ಬಲಿದಾನ 17

**ಅನು : ಡಾ. ಕೆ.ಎಸ್. ಆಮೂರ**
ಅವತಾರ ಪುರುಷರಾದ ಶ್ರೀ ಅರವಿಂದರು 26

**ಅನು : ಶ್ರೀ ವೀರೇಂದ್ರ ಸಿಂಪಿ**
ಶ್ರೀ ಅರವಿಂದರ ವಾಸಸ್ಥಾನ 38

**ಅನುಬಂಧ :**
ಶ್ರೀ ಅರವಿಂದರ ಕರುಣೆ 45

**ವಾರ್ತಾಪತ್ರ** 46


ಈ ದಿನ ಸಾಯಂಕಾಲ, ಪ್ರಶ್ನೆಗಳಿಗೆ ಉತ್ತರ ನೀಡುವ ಕಾರ್ಯಕ್ರಮದ ಬದಲಾಗಿ, ನಾವು ಶ್ರೀ ಅರವಿಂದರ ನೆನಪಿನೊಂದಿಗೆ ಧ್ಯಾನ ಮಾಡುವುದನ್ನು ನಾನು ಬಯಸುತ್ತೇನೆ. ನಮ್ಮಲ್ಲಿ ಆ ನೆನಪನ್ನು ಜೀವಂತವಾಗಿ ಇರಿಸಿಕೊಳ್ಳುವುದಕ್ಕೆ ಮತ್ತು ಈವರೆಗೆ ಕೈಕೊಂಡ ಎಲ್ಲದಕ್ಕೆ, ಇನ್ನೂ ಅವರು ತಮ್ಮ ಎಂದೆಂದಿಗೂ ಪ್ರಕಾಶಮಯ, ಜೀವಂತ ಹಾಗೂ ಕ್ರಿಯಾಶೀಲ ಪ್ರಜ್ಞೆಯಿಂದ ಈ ಶ್ರೇಷ್ಠ ಸಿದ್ಧಿಗಾಗಿ ಕಾರ್ಯ ಕೈಕೊಳ್ಳುತ್ತ ಇರುವುದಕ್ಕೆ ನಾವು ಅವರಿಗೆ ಸಲ್ಲಿಸಬೇಕಾದ ಕೃತಜ್ಞತೆಯೊಂದಿಗೆ ಧ್ಯಾನ ಮಾಡಬೇಕು. ಆ ಸಿದ್ಧಿಯನ್ನು ಕುರಿತು ಪೃಥ್ವಿಗೆ ಘೋಷಿಸಿ ಹೇಳುವುದಕ್ಕಾಗಿ ಅಷ್ಟೇ ಅಲ್ಲ, ಆದರೆ ಸಿದ್ಧಿಸಿಕೊಳ್ಳುವುದಕ್ಕಾಗಿ ಅವರು ಬಂದಿದ್ದರು, ಆ ಸಿದ್ಧಿಸಿಕೊಳ್ಳುವಿಕೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

**(CMW, 9/172)** – ಶ್ರೀಮಾತೆ

*

## ಕೆಲವು ನೆನಪುಗಳು

ನಾನು ಜಪಾನಿನಿಂದ ಬರುತ್ತಿರುವಾಗ ಆದ ಅನುಭವವನ್ನು ಕೇಳಿರಿ; ಸಮುದ್ರದಲ್ಲಿ ಯಾನ ಮಾಡುತ್ತಿದ್ದ ನೌಕೆಯ ಮೇಲಿದ್ದೆ, ಆಗ ನಾನು ಏನನ್ನೂ ನಿರೀಕ್ಷಿಸುತ್ತಿರಲಿಲ್ಲ (ಸಹಜವಾಗಿ ಆಂತರಿಕ ಜೀವನದೊಂದಿಗೆ ಕಾರ್ಯ–ನಿರತಳಾಗಿದ್ದೆ, ಆದರೆ ಭೌತಿಕವಾಗಿ ನಾನು ನೌಕೆಯ ಮೇಲೆ ಜೀವಿಸುತ್ತಿದ್ದೆ), ಪಾಂಡಿಚೇರಿಯಿಂದ ಎರಡು ನಾವಿಕರ(nautical) ಮೈಲುಗಳಷ್ಟು ದೂರ–ದಲ್ಲಿದ್ದಾಗ ಒಮ್ಮಿಂದೊಮ್ಮೆಗೆ ವಾತಾವರಣದ, ಹವೆಯ ಭೌತಿಕ ಗುಣಲಕ್ಷಣ ಎಷ್ಟೊಂದು ಬದಲಾಯಿತೆಂದರೆ ನಾವು ಶ್ರೀ ಅರವಿಂದರ ಪ್ರಭಾಮಂಡಲಿಯಲ್ಲಿ ಪ್ರವೇಶ ಮಾಡುತ್ತಿದ್ದೇವೆ ಎಂಬುದನ್ನು ನಾನು ತಿಳಿದುಕೊಂಡೆ. ಅದು ಭೌತಿಕ ಅನುಭವವಾಗಿತ್ತು, ಸಾಕಷ್ಟು ಜಾಗ್ರತಗೊಂಡ ಪ್ರಜ್ಞೆಯುಳ್ಳ ಯಾರಾದರೂ ಅದೇ ಭಾವನೆಯನ್ನು ತಂದುಕೊಳ್ಳಬಹುದಾಗಿತ್ತೆಂದು ನಾನು ಭರವಸೆ ನೀಡುತ್ತೇನೆ.

ತದ್ವಿರುದ್ಧವಾದ ಅನುಭವವೂ ನನಗಾಗಿತ್ತು. ಇಲ್ಲಿಗೆ ಬಂದು ಹಲವಾರು ವರ್ಷಗಳು ಕಳೆದ ನಂತರ, ಮೊದಲ ಸಲ ನಾನು ಕಾರಿನಲ್ಲಿ ದೂರ ಹೋದಾಗ ಆದ ಅನುಭವ ಅದಾಗಿತ್ತು. ಕೆರೆಯನ್ನು ದಾಟಿ ಸ್ವಲ್ಪ ದೂರ ಸಾಗಿ ಹೋದಾಗ ವಾತಾವರಣ ಒಮ್ಮೆಗೆ ಬದಲಾಗುತ್ತಿದ್ದ ಭಾವನೆ ನನಗೆ ಬಂದಿತು. ಮೊದಲು ಅದರಲ್ಲಿದ್ದ ವೈಶಾಲ್ಯ, ಚೈತನ್ಯ, ಪ್ರಕಾಶ ಹಾಗೂ ಶಕ್ತಿ ಕುಗ್ಗಿ ಹೋಗತೊಡಗಿದವು, ನಂತರ ಏನೂ ಇರಲಿಲ್ಲ. ನಾನು ಮಾನಸಿಕ ಇಲ್ಲವೆ ಪ್ರಾಣಿಕ ಪ್ರಜ್ಞೆಯಲ್ಲಿರಲಿಲ್ಲ, ಸಂಪೂರ್ಣವಾಗಿ ಭೌತಿಕ ಪ್ರಜ್ಞೆಯಲ್ಲಿದ್ದೆ. ಸರಿ, ತಮ್ಮ ಭೌತಿಕ ಪ್ರಜ್ಞೆಯಲ್ಲಿ ಸೂಕ್ಷ್ಮ ಸಂವೇದನೆಯುಳ್ಳವರು ಅದನ್ನು ಬಹಳ ಮೂರ್ತರೂಪದಲ್ಲಿ ಭಾವನೆಗೆ ತಂದುಕೊಳ್ಳಬಲ್ಲರು. ನಾನು ಆಶ್ರಮ ಎಂದು ಕರೆಯುವ ಪ್ರದೇಶದಲ್ಲಿ ಶಕ್ತಿ ಘನೀಕರಣಗೊಂಡಿದೆ, ಅದು ಈ ನಗರದಲ್ಲಿ ಹಾಗಿಲ್ಲ, ಮತ್ತು ಸುತ್ತಲಿನ ಹಳ್ಳಿಗಾಡು ಪ್ರದೇಶದಲ್ಲಿ ಇನ್ನೂ ಕಡಿಮೆ ಪ್ರಮಾಣದಲ್ಲಿದೆ.

**(CWM, 4/223–24)** **– ಶ್ರೀಮಾತೆ**

*

ಚಂಡಮಾರುತ ಭವ್ಯ ರೀತಿಯಲ್ಲಿ ಕಾಣಿಸಿಕೊಂಡ ರಾತ್ರಿ ನಿಮ್ಮ ನೆನಪಿನಲ್ಲಿರಬಹುದು, ಆಗ ಈ ಸ್ಥಳದ ಸುತ್ತ ಪ್ರಬಲ ಸದ್ದು ಮತ್ತು ಮಳೆಯ



ಚೆಲ್ಲಾಟಗಳಿದ್ದವು. ನಾನು ಶ್ರೀ ಅರವಿಂದರ ಕೋಣೆಗೆ ಹೋಗಿ ಅಲ್ಲಿಯ ಕಿಟಕಿಗಳನ್ನು ಮುಚ್ಚಲು ಅವರಿಗೆ ಸಹಾಯ ಮಾಡಬೇಕೆಂದು ಯೋಚಿಸಿದೆ. ಅವರಿದ್ದ ಕೋಣೆಯ ಬಾಗಿಲನ್ನು ಸ್ವಲ್ಪ ತೆರೆದು ನೋಡಿದಾಗ, ಅವರು ಶಾಂತಚಿತ್ತರಾಗಿ ತಮ್ಮ ಮೇಜಿನ ಬಳಿ ಬರೆಯುತ್ತ ಕುಳಿತದ್ದನ್ನು ನೋಡಿದೆ. ಆ ಕೋಣೆಯಲ್ಲಿ ಎಂತಹ ಘನರೂಪದ ಶಾಂತಿ ಇತ್ತೆಂದರೆ, ಅದನ್ನು ನೋಡಿದ ಯಾರೂ ಹೊರಗೆ ಚಂಡಮಾರುತದ ಉದ್ರೇಕವಿರಬಹುದೆಂದು ಕನಸಿನಲ್ಲೂ ಕೂಡ ಕಂಡಿರಲಾರರು. ಎಲ್ಲ ಕಿಟಕಿಗಳು ವಿಸ್ತಾರವಾಗಿ ತೆರೆದುಕೊಂಡಿದ್ದವು, ಮಳೆಯ ಒಂದೂ ಹನಿ ಒಳಗೆ ಬರುತ್ತಿರಲಿಲ್ಲ.

**(CWM, 3/155)** **– ಶ್ರೀಮಾತೆ**

*

### ಶ್ರೀ ಅರವಿಂದರ ದೈವೀ ಶಬ್ದದ ಸಾಮರ್ಥ್ಯ

ನಾನು ಶ್ರೀ ಅರವಿಂದರನ್ನು ಪಾಂಡಿಚೇರಿಯಲ್ಲಿ ಮೊದಲ ಸಲ ಭೇಟಿ ಮಾಡಿದಾಗ ಆದ ಒಂದು ಅನುಭವವನ್ನು ಕುರಿತು ಹೇಳುತ್ತೇನೆ. ಅತಿಮಾನಸ–ದಲ್ಲಿರುವ ವಿಷಯಗಳನ್ನು ನೋಡುತ್ತ ನಾನು ಆಳವಾದ ಏಕಾಗ್ರತೆಯಲ್ಲಿದ್ದೆ, ಇಲ್ಲಿ ಅವುಗಳಿರಬೇಕಾಗಿತ್ತು, ಆದರೆ ಯಾವುದೋ ಕಾರಣದಿಂದಾಗಿ ಅವು ಪ್ರಕಟಗೊಳ್ಳುತ್ತಿರಲಿಲ್ಲ. ನಾನು ನೋಡಿದ್ದನ್ನು ಶ್ರೀ ಅರವಿಂದರಿಗೆ ಹೇಳಿದೆ ಮತ್ತು ಅವು ಪ್ರಕಟವಾಗುವವೇ ಎಂದು ಅವರಿಗೆ ಕೇಳಿದೆ. ಅವರು ಸರಳವಾಗಿ "ಹೌದು" ಎಂದು ಹೇಳಿದರು. ಮತ್ತು ಕೂಡಲೇ ಅತಿಮಾನಸ ಪೃಥ್ವಿಯನ್ನು ಸ್ಪರ್ಶಿಸಿದ್ದನ್ನು ಮತ್ತು ಸಿದ್ಧಿಸಿಕೊಳ್ಳುತ್ತಿರುವುದನ್ನು ನೋಡಿದೆ! ಸತ್ಯವಾದದ್ದನ್ನು ನೈಜವಾಗಿಸುವ ಸಾಮರ್ಥ್ಯವನ್ನು ಸಾಕ್ಷಿಯಾಗಿ ನಾನು ನೋಡಿದ್ದು ಇದು ಮೊದಲ ಸಲವಾಗಿತ್ತು.

**(CWM, 3/141–42)** **– ಶ್ರೀಮಾತೆ**

*

### ಆರ್ಯ ಪತ್ರಿಕೆಯಲ್ಲಿ ಬರೆದದ್ದನ್ನು ಕುರಿತು

ಸ್ವಯಂಪ್ರೇರಿತವಾಗುವುದೆಂದರೆ, ಯೋಚನೆ ಮಾಡಿ ಸಂಘಟಿಸಿ, ವೈಯಕ್ತಿಕ ಪ್ರಯತ್ನದಿಂದ ಅರಿತುಕೊಳ್ಳಲು ಪ್ರಯತ್ನಿಸಿ ವಿಷಯಗಳನ್ನು ಕಂಡುಕೊಳ್ಳುವುದಲ್ಲ. ಸ್ವಯಂಪ್ರೇರಣೆ ಎಂದರೆ ಏನು ಎಂಬುದನ್ನು ನೀವು ತಿಳಿದುಕೊಳ್ಳುವಂತೆ ಮಾಡಲು

ನಾನು ನಿಮಗೆ ಎರಡು ಉದಾಹರಣೆಗಳನ್ನು ಕೊಡಲಿದ್ದೇನೆ. ಮೊದಲನೆಯದು – ನಿಮಗೆಲ್ಲ ಅದರ ಬಗ್ಗೆ ನಿಶ್ಚಿತವಾಗಿ ತಿಳಿದಿದೆ – ಶ್ರೀ ಅರವಿಂದರು 1914ರಲ್ಲಿ ಆರ್ಯ ಪತ್ರಿಕೆಗೆ ಬರೆಯಲು ಪ್ರಾರಂಭ ಮಾಡಿದಾಗಿನ ಸಂಗತಿ. ಅದು ಮಾನಸಿಕ ಜ್ಞಾನದಿಂದ ಇಲ್ಲವೆ ಮನಸ್ಸಿನಿಂದ ಸೃಷ್ಟಿಸಿದ್ದನ್ನು ಲೇಖನ ರೂಪದಿಂದ ಬರೆದಿದ್ದಾಗಿರಲಿಲ್ಲ. ಅವರು ತಮ್ಮ ಮನಸ್ಸನ್ನು ನಿಶ್ಚಲ ನೀರವತೆಯಲ್ಲಿರಿಸುತ್ತಿದ್ದರು ಮತ್ತು ಟಾಯಿಪರಾಯಟರ ಬಳಿ ಕುಳಿತುಕೊಳ್ಳುತ್ತಿದ್ದರು, ಮತ್ತು ಮೇಲ್ಗಡೆಯಿಂದ, ಉಚ್ಚ ಸ್ತರಗಳಿಂದ ಬರೆಯಬೇಕಾದುದೆಲ್ಲ ತಯಾರಾಗಿ ಕೆಳಗಿಳಿದು ಬರುತ್ತಿತ್ತು. ಅವರು ಕೇವಲ ಟಾಯಿಪರಾಯಟರ ಮೇಲೆ ಕೈಬೆರಳುಗಳು ಚಲಿಸುವಂತೆ ಮಾಡಬೇಕಾಗುತ್ತಿತ್ತು, ಅದು ಲಿಪಿಯ ರೂಪ ತಾಳುತ್ತಿತ್ತು. ಮಾನಸಿಕ ನಿಶ್ಚಲ ನೀರವತೆಯ ಈ ಸ್ಥಿತಿ ಮೇಲಿನಿಂದ ಜ್ಞಾನ – ಮತ್ತು ಅಭಿವ್ಯಕ್ತಿ ಕೂಡ – ಸಾಗಿ ಬರಲು ಅನುವು ಮಾಡಿಕೊಡುತ್ತಿತ್ತು. ಇಂತಹ ಸ್ಥಿತಿಯಲ್ಲಿ ಪ್ರತಿ ತಿಂಗಳು 64 ಪುಟಗಳಷ್ಟು ಮುದ್ರಣಗೊಳ್ಳಬೇಕಾದ ವಿಷಯವನ್ನು ಆರ್ಯ ಪತ್ರಿಕೆಗಾಗಿ ಬರೆಯುತ್ತಿದ್ದರು. ಅಲ್ಲದೆ ಈ ಕಾರಣದಿಂದಾಗಿ ಅವರಿಗೆ ಅದನ್ನು ಕೈಕೊಳ್ಳಲು ಸಾಧ್ಯವಾಯಿತು, ಏಕೆಂದರೆ ಅದು ಮನಸ್ಸಿನ ಮೂಲಕ ರಚಿಸಬೇಕಾದ ಕಾರ್ಯವಾಗಿದ್ದರೆ ಅತ್ಯಂತ ಅಸಾಧ್ಯವಾದ ಕಾರ್ಯವಾಗಬಹುದಾಗಿತ್ತು.

**(CWM, 8/281)** **– ಶ್ರೀಮಾತೆ**

*

**ಶಕ್ತಿಗಳ ಸಂಗ್ರಹಣೆ**

(ಶ್ರೀಮಾತೆಯವರು "ಯೋಗ ಸಮನ್ವಯ (Synthesis of Yoga)" ಪುಸ್ತಕವನ್ನು ತೋರಿಸುತ್ತಾರೆ) ಜ್ಞಾನೋದಯವನ್ನುಂಟು ಮಾಡುವ ಈ ಬಗೆಯ ಪುಸ್ತಕದಲ್ಲಿ ಯಾವಾಗಲೂ ಶಕ್ತಿಗಳ ಸಂಗ್ರಹಣೆ ಇರುತ್ತದೆ – ಅದು ಕನಿಷ್ಠ ಪಕ್ಷ ಉಚ್ಚತರ ಮಾನಸಿಕ ಶಕ್ತಿಗಳ ಸಂಗ್ರಹಣೆಯಾಗಿರಬಹುದು, ಬಹಳಷ್ಟು ಸಲ ಅಲ್ಲಿ ಅತ್ಯುಚ್ಚ ಜ್ಞಾನದ ಹಾಗೂ ಆಧ್ಯಾತ್ಮಿಕ ಶಕ್ತಿಗಳು ಒಟ್ಟುಗೂಡಿರಬಹುದು. ಪ್ರತಿಯೊಂದು ಪುಸ್ತಕ, ಅದು ಒಳಗೊಂಡಿರುವ ಶಬ್ದಗಳಿಂದಾಗಿ ಈ ಶಕ್ತಿಗಳ ಚಿಕ್ಕ ಸಂಗ್ರಾಹಕ (accumulator) ವಿದ್ದ ಹಾಗಿರುತ್ತದೆ. ಜನರಿಗೆ ಇದು ತಿಳಿದಿರುವುದಿಲ್ಲ, ಏಕೆಂದರೆ ಅದನ್ನು ಹೇಗೆ ಉಪಯೋಗಿಸಬೇಕೆಂಬುದು ಅವರಿಗೆ ತಿಳಿದಿರುವುದಿಲ್ಲ. ಅದೇ ರೀತಿ ಪ್ರತಿಯೊಂದು ಛಾಯಾಚಿತ್ರದಲ್ಲಿ ಒಂದು ಸಂಗ್ರಹಣೆ ಇರುತ್ತದೆ, ಚಿಕ್ಕ ಪ್ರಮಾಣದಲ್ಲಿರುವ ಆ ಸಂಗ್ರಹಣೆ ಆ ವ್ಯಕ್ತಿಯ ಶಕ್ತಿಯನ್ನು, ಸ್ವಭಾವವನ್ನು, ಅವನಲ್ಲಿ



ಸಾಮರ್ಥ್ಯಗಳಿದ್ದರೆ ಅವುಗಳನ್ನು ಪ್ರತಿನಿಧಿಸುತ್ತದೆ. ಈಗ, ನೀವು ನಿಷ್ಕಪಟರಾಗಿದ್ದಾಗ ಹಾಗೂ ನಿಮ್ಮಲ್ಲಿ ಒಂದು ಅಭೀಪ್ಸೆಯಿದ್ದಾಗ ಒಂದು ಬಗೆಯ ಕಂಪನವನ್ನು ಹೊರಗೆ ಹಾಕುತ್ತೀರಿ, ಅದು ನಿಮ್ಮ ಅಭೀಪ್ಸೆಯ ಕಂಪನ, ಪುಸ್ತಕದಲ್ಲಿ ಅದಕ್ಕೆ ಅನುಗುಣವಾದ ಶಕ್ತಿಯನ್ನು ಅದು ಭೇಟಿ ಮಾಡುತ್ತದೆ ಮತ್ತು ಉಚ್ಚತರ ಪ್ರಜ್ಞೆ ನಿಮಗೆ ಉತ್ತರ ನೀಡುತ್ತದೆ.

ಸಾಧ್ಯಗೊಳಿಸುವ ರೂಪದಲ್ಲಿ ಪ್ರತಿಯೊಂದನ್ನು ಒಳಗೊಳ್ಳಲಾಗಿರುತ್ತದೆ. ಇಡಿಯಾದುದರ ಪ್ರತಿಯೊಂದು ಅಂಶ ಸಾಧ್ಯಗೊಳಿಸುವ ರೂಪದಲ್ಲಿ ಇಡಿಯಾದುದರಲ್ಲಿರುವುದನ್ನು ಒಳಗೊಂಡಿರುತ್ತದೆ. ವಿವರಣೆ ನೀಡುವುದಕ್ಕೆ ಅದು ಸ್ವಲ್ಪ ಕಠಿಣವಾಗಿರುತ್ತದೆ. ಆದರೆ ಉದಾಹರಣೆಯ ಮೂಲಕ ನೀವು ಅದನ್ನು ತಿಳಿದುಕೊಳ್ಳಬಹುದು. ಯಕ್ಷಿಣಿ ವಿದ್ಯೆ(magic)ಯನ್ನು ಪ್ರಯೋಗದಲ್ಲಿ ತರಲು ಬಯಸುವ ಜನರಲ್ಲಿ ಉಗುರಿನ ಸ್ವಲ್ಪ ಭಾಗ ಇಲ್ಲವೆ ಕೂದಲು ಇದ್ದರೆ ಸಾಕಾಗುತ್ತದೆ, ಏಕೆಂದರೆ ಅದರಲ್ಲಿ ಸತ್ತೆಯಲ್ಲಿರುವುದನ್ನೆಲ್ಲ ಸಾಧ್ಯಗೊಳಿಸು–ವಂತಹದು ಇರುತ್ತದೆ. ಮತ್ತು ಪುಸ್ತಕವೊಂದರಲ್ಲಿ – ಅಭಿವ್ಯಕ್ತಗೊಳಿಸಲಾಗಿರದ, ಪ್ರಕಟಗೊಳಿಸದೆ ಇರುವ – ಪುಸ್ತಕ ಬರೆದವನಲ್ಲಿರುವ ಸಾಧ್ಯವಾಗಿಸುವ ಜ್ಞಾನವಿರುತ್ತದೆ. ಹೀಗೆ ಅರಿತುಕೊಳ್ಳುವಿಕೆ (comprehension), ಜ್ಞಾನ ಹಾಗೂ ಸಾಮರ್ಥ್ಯ ಇವುಗಳನ್ನೆಲ್ಲ ಶ್ರೀ ಅರವಿಂದರು ಪ್ರತಿನಿಧಿಸುತ್ತಾರೆ ಮತ್ತು ಅವರ ಪುಸ್ತಕಗಳಲ್ಲಿ ಪ್ರತಿಯೊಂದು ಅವರಲ್ಲಿರುವುದನ್ನು ಸಂಕೇತರೂಪದಲ್ಲಿ, ಸಾಧ್ಯ–ಗೊಳಿಸುವ ರೂಪದಲ್ಲಿ ಒಳಗೊಂಡಿರುತ್ತದೆ.

ಆದ್ದರಿಂದ ಪುಸ್ತಕದ ಮೇಲೆ ಏಕಾಗ್ರತೆ ವಹಿಸಿದರೆ ಆ ಪುಸ್ತಕದ ಮೂಲಕ ಅದರ ಮೂಲದತ್ತ ಹಿಂದಿರುಗಿ ಸಾಗಿ ಹೋಗಬಹುದು. ಪುಸ್ತಕದ ಮೂಲಕ ಸಾಗಿ ಹೋಗುವುದರಿಂದಲೂ ಕೂಡ ಕೇವಲ ಪುಸ್ತಕದಲ್ಲಿರುವುದಕ್ಕಿಂತ ಹೆಚ್ಚಿನದನ್ನು ನೀವು ಸ್ವೀಕರಿಸಬಲ್ಲಿರಿ.

**(CWM, 8/261–62)** **– ಶ್ರೀಮಾತೆ**

*

**ಶ್ರೀ ಅರವಿಂದರ ಬರಹಗಳನ್ನು ಓದುವುದು**

ಸಂದರ್ಭ ಯಾವುದೇ ಇರಲಿ, ಯಾವಾಗಲೂ ಒಂದು ಸಮಯದಲ್ಲಿ ಸ್ವಲ್ಪ ಭಾಗವನಷ್ಟೇ ಓದಿರಿ, ಮನಸ್ಸು ಸಾಧ್ಯವಿದ್ದಷ್ಟು ಪ್ರಶಾಂತ ಸ್ಥಿತಿಯಲ್ಲಿರಲಿ,

ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಬೇಡ, ಆದರೆ ಮಿದುಳನ್ನು ಸಾಧ್ಯವಿದ್ದಷ್ಟು ನಿಶ್ಚಲ ನೀರವತೆಯಲ್ಲಿರುವಂತೆ ಮಾಡಿರಿ, ಓದುತ್ತಿರುವುದರಲ್ಲಿ ಒಳಗೊಂಡ ಶಕ್ತಿ ಅಂತರಂಗದ ಆಳದಲ್ಲಿ ಪ್ರವೇಶಿಸಲು ಅನುವುಮಾಡಿಕೊಡಿರಿ. ಸ್ಥಿರತೆಯ ಸ್ಥಿತಿಯಲ್ಲಿ, ನಿಶ್ಚಲ ನೀರವತೆಯಲ್ಲಿ ಸ್ವೀಕರಿಸಿದ ಈ ಶಕ್ತಿ ಪ್ರಕಾಶ ನೀಡುವ ಕಾರ್ಯ ಮಾಡುತ್ತದೆ ಮತ್ತು ಅರ್ಥಮಾಡಿಕೊಳ್ಳುವುದಕ್ಕೆ ಅವಶ್ಯವಾದರೆ ಮಿದುಳಿನಲ್ಲಿ ಅದಕ್ಕೆ ಬೇಕಾಗಿರುವ ಜೀವಕೋಶಗಳನ್ನು ಸೃಷ್ಟಿ ಮಾಡುತ್ತದೆ. ಹೀಗೆ ಮನುಷ್ಯ, ಕೆಲವು ತಿಂಗಳುಗಳ ನಂತರ, ಅದನ್ನೇ ಮತ್ತೆ ಓದಿದರೆ, ಅಲ್ಲಿ ಅಭಿವ್ಯಕ್ತಪಡಿಸಲಾದ ಯೋಚನೆ ಹೆಚ್ಚು ಸ್ಪಷ್ಟವಾಗಿರುವುದನ್ನು ಮತ್ತು ಹೆಚ್ಚು ಹತ್ತಿರವಾಗಿರುವುದನ್ನು ಗ್ರಹಿಕೆಗೆ ತಂದುಕೊಳ್ಳುತ್ತಾನೆ, ಕೆಲವೊಮ್ಮೆ ಅದು ಅವನಿಗೆ ಒಟ್ಟಿನಲ್ಲಿ ಬಹಳ ಪರಿಚಿತವಾದದ್ದಾಗಿರುತ್ತದೆ.

ಪ್ರತಿದಿನ, ಸಾಧ್ಯವಾದರೆ ನಿಶ್ಚಿತಪಡಿಸಿದ ಸಮಯದಲ್ಲಿ ಸ್ವಲ್ಪ ಭಾಗವನ್ನು ಕ್ರಮಬದ್ಧವಾಗಿ ಓದುವುದು ಹೆಚ್ಚು ಯೋಗ್ಯವಾಗಿರುತ್ತದೆ, ಇದು ಮಿದುಳಿನ ಸ್ವೀಕೃತಿಯನ್ನು ಸುಗಮಗೊಳಿಸುತ್ತದೆ.

**(CWM, 12/203)** **– ಶ್ರೀಮಾತೆ**

*

**ಪರಿಪೂರ್ಣ ತಿಳಿವಳಿಕೆ**

ನಾನು ಶ್ರೀ ಅರವಿಂದರ ಹತ್ತಿರ ಮಾತನಾಡಿದಾಗ ಮಧ್ಯವರ್ತಿ ವಿಚಾರಗಳ ಮೂಲಕ ಸಾಗಿ ಹೋಗುವ ಆವಶ್ಯಕತೆ ಇರುತ್ತಿರಲಿಲ್ಲ. ಅವರು ಒಂದು ವಿಷಯ ಕುರಿತು ಹೇಳುತ್ತಿದ್ದರು, ದೂರದಲ್ಲಿ ಕಂಡುಬರುವ ಪರಿಣಾಮವನ್ನು ನಾನು ನೋಡುತ್ತಿದ್ದೆ. ನಾವು ಯಾವಾಗಲೂ ಆ ರೀತಿ ಮಾತನಾಡುತ್ತಿದ್ದೆವು. ನಮ್ಮ ಮಾತುಕತೆ ನಡೆದ ಸಂದರ್ಭದಲ್ಲಿ ಒಬ್ಬ ವ್ಯಕ್ತಿ ಉಪಸ್ಥಿತನಿದ್ದರೆ "ಅವರೇನನ್ನು ಕುರಿತು ಮಾತನಾಡುತ್ತಿದ್ದಾರೆ" ಎಂದು ಅವನು ಹೇಳಬಹುದಾಗಿತ್ತು. ಆದರೆ ನಮಗೆ ಅದು ಮುಂದುವರಿದುಕೊಂಡು ಹೋದ ವಾಕ್ಯದಷ್ಟೇ ಸ್ಪಷ್ಟವಾಗಿರುತ್ತಿತ್ತು. ಅದನ್ನು ನೀವು ಮಾನಸಿಕ ಪವಾಡ ಎಂದು ಕರೆಯಬಹುದು – ಅದು ಪವಾಡವಾಗಿರಲಿಲ್ಲ, ಅದು ಸರಳವಾಗಿ, ಶ್ರೀ ಅರವಿಂದರಿಗೆ ಮಾನಸಿಕ ಗೋಚರ ವಿಷಯ ಕುರಿತು ಇಡಿಯಾದ ದರ್ಶನವಿರುವ ವಿಷಯವಾಗಿತ್ತು. ಮತ್ತು ಹಾಗಾಗಿ ಎಲ್ಲ ಮುನ್ನಡೆಯ ಹಂತಗಳ ಮೂಲಕ ಹಾಯ್ದು ಹೋಗುವುದಕ್ಕೆ ಬಹಳ



ಸಮಯ ಹಾಳು ಮಾಡುವ ಆವಶ್ಯಕತೆ ನಮಗಿರಲಿಲ್ಲ. ಆ ರೀತಿಯನ್ನು ಅನುಸರಿಸಲು ಕ್ಷಮತೆಯುಳ್ಳ ವ್ಯಕ್ತಿಗೆ ಆ ವಿಷಯ ಬಹಳ ಸ್ವಾಭಾವಿಕವಾದದ್ದು ಹಾಗೂ ತರ್ಕಬದ್ಧವಾದದ್ದು ಆಗಿರಬಹುದಾಗಿತ್ತು, ಆದರೆ ಅಜ್ಞಾನಿ ಜನರಿಗೆ ಅದು 'ಪವಾಡ'ವಾಗಿತ್ತು.

**(CWM, 4/85)** **– ಶ್ರೀಮಾತೆ**

*

**ಗುಣ ಪಡಿಸುವ ನೋಟ**

ನನ್ನ ಹತ್ತಿರ ಬಹಳ ಮುದ್ದಾದ ಬೆಕ್ಕಿನ ಮರಿ ಇತ್ತು, ಅದು ಬಹಳ ಸಂಪೂರ್ಣವಾಗಿ ನಾಗರಿಕವಾಗಿದ್ದ ಹಾಗಿತ್ತು, ಅದ್ಭುತ ಬೆಕ್ಕಾಗಿತ್ತು. ಅದು ನಮ್ಮ ಮನೆಯಲ್ಲಿಯೇ ಜನ್ಮ ತಾಳಿತ್ತು. ಎಲ್ಲ ಬೆಕ್ಕುಗಳಿಗಿರುವ ರೂಢಿಗಳು ಅದರಲ್ಲಿದ್ದವು, ಎಂದರೆ ಅದು ಚಲಿಸುತ್ತಿರುವ ಏನಾದರೊಂದನ್ನು ಕಂಡಾಗ ಅದರೊಂದಿಗೆ ಆಟವಾಡುತ್ತಿತ್ತು. ಅದೇ ಸಮಯದಲ್ಲಿ ಆ ಮನೆಯಲ್ಲಿ ದೊಡ್ಡ ಚೇಳೊಂದಿತ್ತು. ತನ್ನ ರೂಢಿಯ ಹಾಗೆ ಆ ಬೆಕ್ಕು ಚೇಳಿನೊಂದಿಗೆ ಆಟ ಪ್ರಾರಂಭಿಸಿತು. ಆ ಚೇಳು ಬೆಕ್ಕನ್ನು ಕಡಿಯಿತು. ಆದರೆ ಆ ಬೆಕ್ಕು ಅಪರೂಪದ್ದಾಗಿತ್ತು, ಅದು ನನ್ನ ಬಳಿ ಬಂದಿತು, ಹೆಚ್ಚಿನ ಮಟ್ಟಿಗೆ ಸಾಯುವ ಸ್ಥಿತಿಯಲ್ಲಿತ್ತು. ಆದರೆ ಅದು ನನಗೆ ಗಾಯಗೊಂಡ ಕಾಲಿನ ಭಾಗವನ್ನು ತೋರಿಸಿತು, ಆ ಭಾಗ ಅದಾಗಲೆ ಉಬ್ಬಿಕೊಂಡಿತ್ತು ಮತ್ತು ಭಯಾನಕ ಸ್ಥಿತಿಯಲ್ಲಿತ್ತು. ನಾನು ನನ್ನ ಬೆಕ್ಕಿನತ್ತ ನೋಡಿದೆ – ಅದು ನಿಜವಾಗಿ ಮುದ್ದಿನದಾಗಿತ್ತು – ಅದನ್ನು ಮೇಜಿನ ಮೇಲಿರಿಸಿ ಶ್ರೀ ಅರವಿಂದರನ್ನು ಕರೆದು "ಕಿಕಿ(ಬೆಕ್ಕಿನ ಹೆಸರು)ಯನ್ನು ಚೇಳು ಕಡಿದಿದೆ, ಅದನ್ನು ಗುಣಪಡಿಸಬೇಕಾಗಿದೆ" ಎಂದು ಅವರಿಗೆ ಹೇಳಿದೆ. ಬೆಕ್ಕು ತನ್ನ ತಲೆಯನ್ನು ಚಾಚಿ ಶ್ರೀ ಅರವಿಂದರತ್ತ ನೋಡಿತು, ಅದರ ಕಣ್ಣುಗಳು ಅದಾಗಲೇ ಗಾಜಿನಂತಾಗಿದ್ದವು. ಶ್ರೀ ಅರವಿಂದರು ಅದರ ಎದುರು ಕುಳಿತು ಅದರತ್ತ ನೋಡಿದರು. ನಂತರ ಆ ಬೆಕ್ಕು ಕ್ರಮೇಣ ಚೇತರಿಸಿಕೊಳ್ಳಲು ಪ್ರಾರಂಭಮಾಡಿದ್ದನ್ನು, ಸುಸ್ಥಿತಿಗೆ ಬರುತ್ತಿರುವುದನ್ನು ನೋಡಿದೆವು. ಮತ್ತು ಒಂದು ಗಂಟೆಯ ನಂತರ ಅದು ತನ್ನ ಕಾಲಿನ ಮೇಲಿಂದ ಜಿಗಿದು ಸಂಪೂರ್ಣ ವಾಸಿಯಾಗಿ ಹೊರಟು ಹೋಯಿತು.

**(CWM, 4/237–38)** **– ಶ್ರೀಮಾತೆ**

*

## ಗುಣ ಪಡಿಸುವ ದೈವೀ ಹಸ್ತ

ಆಧ್ಯಾತ್ಮಿಕವಾಗಿ ಒಂದು ರೋಗಕ್ಕೆ ಚಿಕಿತ್ಸೆ ನೀಡಲು ಎರಡು[1] ಮಾರ್ಗಗಳಿವೆ. ಒಂದು ರೋಗಕ್ಕೀಡಾದ ಭೌತಿಕ ಭಾಗದ ಮೇಲೆ ಪ್ರಜ್ಞೆಯ ಹಾಗೂ ಸತ್ಯದ ಶಕ್ತಿಯನ್ನು ಇರಿಸುವುದಾಗಿದೆ. ಈ ಸಂದರ್ಭದಲ್ಲಿ ಉತ್ಪಾದಿಸಿದ ಪರಿಣಾಮ ಸ್ವಾಭಾವಿಕವಾಗಿ ವ್ಯಕ್ತಿಯ ಸ್ವೀಕರಿಸುವಿಕೆಯ ಮೇಲೆ ಅವಲಂಬಿಸಿರುತ್ತದೆ. ವ್ಯಕ್ತಿಯಲ್ಲಿ ಸ್ವೀಕರಿಸುವಿಕೆ ಇದ್ದ ಸಂದರ್ಭದಲ್ಲಿ ರೋಗಕ್ಕೀಡಾದ ಭಾಗದ ಮೇಲಿರಿಸಿದ ಪ್ರಜ್ಞೆ ಹಾಗೂ ಅದರ ಒತ್ತಡ ವ್ಯವಸ್ಥೆಯನ್ನು ಮರಳಿ ತರುತ್ತವೆ. ಅಂತಹ ರೋಗಿಗಳನ್ನು ಶ್ರೀ ಅರವಿಂದರು ಹೇಗೆ ಗುಣ ಪಡಿಸಿದರು ಎಂಬುದನ್ನು ಇಲ್ಲಿರುವ ನಿಮ್ಮಲ್ಲಿ ಹಲವಾರು ಜನರು ಹೇಳಬಹುದಾಗಿದೆ. ಅವರ ಒಂದು ಹಸ್ತ ಹೊರಗೆ ಬಂದು ನೋವನ್ನು ತೆಗೆದುಕೊಂಡು ಹೋಗುತ್ತಿತ್ತು. ಅದು ಅಷ್ಟು ಸ್ಪಷ್ಟವಾಗಿರುತ್ತಿತ್ತು.

*

## ಉಪದ್ರವವನ್ನುಂಟು ಮಾಡುತ್ತಿದ್ದ ಗಡಿಯಾರಗಳು

ಶ್ರೀ ಅರವಿಂದರು ತಮ್ಮ ಕೋಣೆಗಳಲ್ಲಿ, ವ್ಯಾಯಾಮಕ್ಕಾಗಿ, ಅತ್ತಿಂದಿತ್ತ ಸುತ್ತಾಟ (walking) ಮಾಡುವ ರೂಢಿಯನ್ನಿಟ್ಟುಕೊಂಡಿದ್ದ ದಿನಗಳಲ್ಲಿ ನಡೆದಿದ್ದರ ಸಂಗತಿಯನ್ನು ಕುರಿತು ಈ ಬೇರೆ ಕತೆ ಹೀಗಿದೆ: ಆ ರೀತಿ ಅವರು ಹಲವಾರು ಗಂಟೆಗಳ ಕಾಲ ನಡೆದಾಡುತ್ತಿದ್ದರು, ಅದು ಅವರು ಧ್ಯಾನ ಮಾಡುವ ರೀತಿಯಾಗಿತ್ತು. ಕೇವಲ ಅವರಿಗೆ ಗಂಟೆ ಎಷ್ಟಾಗಿರುತ್ತದೆ ಎಂಬುದನ್ನು ನೋಡಬೇಕಾಗಿರುತ್ತಿತ್ತು. ಹಾಗಾಗಿ ಪ್ರತಿಯೊಂದು ಕೋಣೆಯಲ್ಲಿ ಒಂದು ಗಡಿಯಾರವನ್ನು ಇಡಲಾಗಿತ್ತು. ಅದರಿಂದಾಗಿ ಅವರು ಯಾವುದೇ ಕ್ಷಣದಲ್ಲಿ ಸಮಯವನ್ನು ತಿಳಿದುಕೊಳ್ಳಬಹುದಾಗಿತ್ತು. ಇಂತಹ ಮೂರು ಗಡಿಯಾರ-ಗಳಿದ್ದವು. ಒಂದು ನಾನು ಕಾರ್ಯಕೈಕೊಳ್ಳುತ್ತಿದ್ದ ಕೋಣೆಯಲ್ಲಿತ್ತು. ಅದು ಅವರ ಸುತ್ತಾಟದ ಪ್ರಾರಂಭದ ಸ್ಥಳವಾಗಿತ್ತು. ಒಂದು ದಿನ ಅವರು ಬಂದು "ಈಗ ಗಂಟೆ

---

1 ಇನ್ನೊಂದು ಸಂದರ್ಭದಲ್ಲಿ ಸ್ವೀಕರಿಸುವಿಕೆಯಲ್ಲಿರುವ ಕೊರತೆ ಒಟ್ಟಿನಲ್ಲಿ ದೇಹ-ದಲ್ಲಿರುವುದು ಕಂಡುಬರುತ್ತದೆ ಇಲ್ಲವೆ ಅದರ ಸ್ವೀಕರಿಸುವಿಕೆ ಸಾಕಷ್ಟಾಗಿರದಿದ್ದರೆ ಆ ರೋಗವನ್ನು ತಂದ ಮನೋವೈಜ್ಞಾನಿಕ ಸ್ಥಿತಿಗೆ ಆಂತರಿಕವಾಗಿ ಅನುಗುಣ-ವಾದದ್ದನ್ನು ನೋಡಲಾಗುತ್ತದೆ ಮತ್ತು ಆ ರೋಗದ ಮೇಲೆ ಕಾರ್ಯ ಕೈಕೊಳ್ಳಲಾಗುತ್ತದೆ.



ಎಷ್ಟಾಗಿದೆ?" ಎಂದು ಕೇಳಿದರು. ಅವರು ಗಡಿಯಾರದತ್ತ ನೋಡಿದಾಗ ಅದು ನಿಂತುಬಿಟ್ಟಿತ್ತು. ಅವರು "ಮುಂದಿನ ಕೋಣೆಗೆ ಹೋಗಿ ಅಲ್ಲಿ ಗಂಟೆ ಎಷ್ಟಾಗಿದೆ ಎಂಬುದನ್ನು ನೋಡುತ್ತೇನೆ" ಎಂದು ಹೇಳುತ್ತ ಅಲ್ಲಿಗೆ ಹೋದರು. ಅಲ್ಲಿದ್ದ ಗಡಿಯಾರ ಕೂಡ ಮೊದಲಿನ ಗಡಿಯಾರ ತೋರಿಸುತ್ತಿದ್ದ ವೇಳೆಗೆ ನಿಂತುಬಿಟ್ಟಿತ್ತು, ಕೇವಲ ಕೆಲವು ಸೆಕೆಂಡುಗಳ ಅಂತರವಿತ್ತು. ಅವರು ಮೂರನೆಯ ಕೋಣೆಗೆ ಹೋದರು, ಅಲ್ಲಿದ್ದ ಗಡಿಯಾರ ಕೂಡ ನಿಂತುಬಿಟ್ಟಿತ್ತು. ಅವರು ಸುತ್ತಾಟವನ್ನು ಮೂರು ಸಲ ಮುಂದುವರಿಸಿದರು, ಎಲ್ಲ ಗಡಿಯಾರಗಳು ನಿಂತುಬಿಟ್ಟಿದ್ದವು! ನಂತರ ಅವರು ನನ್ನ ಕೋಣೆಗೆ ಬಂದು "ಆದರೆ ಇದು ಅಸಾಧ್ಯವಾದ ವಿಷಯ. ಇದು ಕೆಟ್ಟ ರೀತಿಯ ತಮಾಷೆ!" ಎಂದು ಹೇಳಿದರು, ಮತ್ತು ಎಲ್ಲ ಗಡಿಯಾರಗಳು, ಒಂದರ ನಂತರ ಒಂದರಂತೆ ಮತ್ತೆ ಕಾರ್ಯ ಮಾಡಲು ಪ್ರಾರಂಭಿಸಿದವು.

**(CWM, 4/275–76)** – **ಶ್ರೀಮಾತೆ**

*

## ಕ್ರೌರ್ಯ ಶ್ರೀ ಅರವಿಂದರಿಗೆ ಅತ್ಯಂತ ಅಸಹ್ಯವಾದ ಒಂದು ವಿಷಯವಾಗಿತ್ತು

ಶ್ರೀ ಅರವಿಂದರಿಗೆ ಅಸಹ್ಯವಾದ ವಿಷಯಗಳಲ್ಲಿ ಕ್ರೌರ್ಯ ಅತ್ಯಂತ ಅಸಹ್ಯವಾಗಿತ್ತು. "ಅದು ಗಾಢತೆಯೊಂದು ವಿರೂಪಗೊಂಡ ಸ್ಥಿತಿ" ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಬಹುಮಟ್ಟಿಗೆ ಅದು ಪ್ರೇಮದ ಗಾಢತೆ ವಿರೂಪಗೊಂಡದ್ದು ಎಂದು ಹೇಳಬಹುದು, ಅದು ಮಧ್ಯ ಮಾರ್ಗದಲ್ಲಿ ತೃಪ್ತಿ ಪಡೆಯುವಂತಹದಲ್ಲ, ಅದಕ್ಕೆ ಪರಮಾವಧಿ ಸ್ವರೂಪವು ಬೇಕಾಗಿರುತ್ತದೆ – ಅದು ಸಮರ್ಥನೀಯವಾಗಿರುತ್ತದೆ. ಏನನ್ನೂ ಭಾವನೆಗೆ ತಂದುಕೊಳ್ಳದ ತಮಸ್ಸಿನ ದಟ್ಟ ಪದರುಗಳಲ್ಲಿ ಒಳನುಗ್ಗಿ ಹೋಗಲು ಕ್ರೌರ್ಯಕ್ಕೆ ಹಿಂಸಾನಂದ (sadism) ದ ಹಾಗೆ ಭೀಕರ, ಪರಮಾವಧಿ ಬಲವಿರುವ ಸಂವೇದನೆಯ ಆವಶ್ಯಕತೆ ಇರುತ್ತದೆ ಎಂದು ನನಗೆ ಯಾವಾಗಲೂ ತಿಳಿದಿತ್ತು. ಭಾವನೆಗೆ ತಂದುಕೊಳ್ಳಲು ಶಕ್ತವಾಗುವುದಕ್ಕೆ ತಮಸ್ಸಿಗೆ ಪರಮಾವಧಿ ಸ್ವರೂಪದ ಏನೋ ಒಂದು ಬೇಕಾಗಿರುತ್ತದೆ.

**(CWM, 10/105–06)** – **ಶ್ರೀಮಾತೆ**

*

## ಮನಸ್ಸಿನಲ್ಲಿ ಪವಾಡಗಳು

ಶ್ರೀ ಅರವಿಂದರನ್ನು ಕುರಿತು ಹೇಳುವುದಾದರೆ ಅವರು ಬಹಳಷ್ಟು ಸಲ ಹೇಳಿದ್ದು ಮಾತ್ರ ನನಗೆ ತಿಳಿದಿದೆ. ಭೌತಿಕ ಹಾಗೂ ಪ್ರಾಣಿಕ ಜಗತ್ತುಗಳಲ್ಲಿ ಮಧ್ಯೆ

ಪ್ರವೇಶಿಸುವವುಗಳಿಗೆ ಮಾತ್ರ ಜನರು ಪವಾಡಗಳೆಂದು ಹೆಸರು ಕೊಡುತ್ತಾರೆ. ಮಧ್ಯೆ ಪ್ರವೇಶಿಸುವ ಇವು ಯಾವಾಗಲೂ ಅಜ್ಞಾನದ ಹಾಗೂ ಸ್ವೇಚ್ಛೆಯ ಚಲನೆ–ಗಳೊಂದಿಗೆ ಮಿಶ್ರಣಗೊಳ್ಳುತ್ತವೆ. ಆದರೆ ಶ್ರೀ ಅರವಿಂದರು ಮನಸ್ಸಿನಲ್ಲಿ ಮಾಡಿ ತೋರಿಸಿದ ಪವಾಡಗಳ ಸಂಖ್ಯೆ ಅಪರಿಮಿತವಾಗಿದೆ. ಆದರೆ, ಸ್ವಾಭಾವಿಕವಾಗಿ, ನೀವು ಅದನ್ನು ಕಾಣಬೇಕಾದರೆ ನಿಮ್ಮಲ್ಲಿ ಬಹಳ ಸರಳ, ಬಹಳ ನಿಷ್ಕಪಟ ಮತ್ತು ಬಹಳ ಪರಿಶುದ್ಧ ದೃಷ್ಟಿ ಇರಬೇಕು. ಅತಿ ಕಡಿಮೆ ಜನರು ಅದನ್ನು ನೋಡಿದ್ದರು. ಆದರೆ ಯಾವುದೇ ಭೌತಿಕ ಇಲ್ಲವೆ ಪ್ರಾಣಿಕ ಪವಾಡ ಮಾಡಿ ತೋರಿಸುವುದನ್ನು ಅವರು ತಿರಸ್ಕರಿಸುತ್ತಿದ್ದರೆಂಬುದು ನನಗೆ ತಿಳಿದಿದೆ, ಏಕೆಂದರೆ ಅದರಲ್ಲಿ ಮಿಶ್ರಣವಿರುತ್ತಿತ್ತು. ನನ್ನ ಅನುಭವದ ಪ್ರಕಾರ ಜಗತ್ತಿನ ಪ್ರಸ್ತುತ ಸ್ಥಿತಿಯಲ್ಲಿ ನೇರವಾದ ಪವಾಡ – ಅದು ಭೌತಿಕದಲ್ಲಿರಲಿ ಇಲ್ಲವೆ ಪ್ರಾಣಿಕದಲ್ಲಿರಲಿ – ಸ್ವೀಕರಿಸಲು ಯೋಗ್ಯವಾಗಿರದ ಮಿಥ್ಯೆಯ ಹಲವಾರು ಅಂಶಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ – ಅವು ಅವಶ್ಯವಾಗಿ ಮಿಥ್ಯೆಯ ಪವಾಡಗಳಾಗಿರುತ್ತವೆ. ... ಈಗಿನ ದಿನಗಳಲ್ಲಿ ಪವಾಡಗಳೆಂದು ಕರೆಯುವವುಗಳನ್ನು, ಬಹುಮಟ್ಟಿಗೆ, ಯಾವಾಗಲೂ, ಪ್ರಾಣಿಕ ಸತ್ತೆಗಳು ಇಲ್ಲವೆ ಆ ಸತ್ತೆಗಳ ಸಂಪರ್ಕದಲ್ಲಿರುವರು ಕೈಕೊಂಡಿರುತ್ತಾರೆ ಮತ್ತು ಇದು ಮಿಶ್ರಣ – ಅದು ಕೆಲವು ವಿಷಯಗಳ ನೈಜತೆಯನ್ನು, ಸತ್ಯವಲ್ಲದ ವಿಷಯಗಳ ಸತ್ಯವನ್ನು ಒಪ್ಪಿಕೊಳ್ಳುತ್ತದೆ. ಮತ್ತು ಈ ಆಧಾರದ ಮೇಲೆ ಅದು ಕಾರ್ಯ ಮಾಡುತ್ತದೆ. ಹಾಗಾಗಿ ಅದು ಸ್ವೀಕಾರ–ಯೋಗ್ಯವಾಗಿಲ್ಲ.

**(CWM, 10/158–59)** **– ಶ್ರೀಮಾತೆ**

*

**ದೈವೀ ತ್ಯಾಗ**

ಸಾಮಾನ್ಯ ರೂಢಿಯಂತೆ ಒಂದು ದಿನ ನಾನು ಏನು ಸಂಭವಿಸುತ್ತದೆ ಎಂಬುದನ್ನು ಹೇಳಲು ಶ್ರೀ ಅರವಿಂದರ ಬಳಿ ಹೋದೆ – ನಾವು ಬಹಳ ಸ್ವಾರಸ್ಯಕರವಾದ ಹಂತ ತಲುಪಿದ್ದೆವು. ಸಂಭವಿಸಿದ್ದರ ಬಗ್ಗೆ ಹೇಳುವಾಗ ನಾನು ಸ್ವಲ್ಪ ಉತ್ಸುಕತೆ ತೋರಿಸಿದೆ ಎಂದೆನಿಸುತ್ತದೆ. – ಆಗ ಶ್ರೀ ಅರವಿಂದರು ನನ್ನತ್ತ ನೋಡಿದರು ಮತ್ತು ಅವರು ಹೇಳಿದ್ದು ಹೀಗಿದೆ: "ಹೌದು, ಇದು ಅಧಿಮಾನಸ ಸೃಷ್ಟಿ. ಅದು ಬಹಳ ಸ್ವಾರಸ್ಯಕರವಾಗಿದೆ, ಅದನ್ನು ಚೆನ್ನಾಗಿ ಕೈಕೊಳ್ಳಲಾಗಿದೆ, ನೀವು ಪವಾಡಗಳನ್ನು ಮಾಡುವಿರಿ, ಅವು ನಿಮ್ಮನ್ನು ಜಗತ್ತಿನಾದ್ಯಂತ ಪ್ರಸಿದ್ಧರಾದ–ವರನ್ನಾಗಿ ಮಾಡುವವು. ಪೃಥ್ವಿಯ ಮೇಲಿನ ಎಲ್ಲ ಘಟನೆಗಳು ತಲೆ ಕೆಳಗಾಗುವಂತೆ ಅವುಗಳಿಗೆ ತಿರುವುಕೊಡಬಲ್ಲಿರಿ....". ಮತ್ತು ನಂತರ ಮುಗುಳ್ನಕ್ಕು ಹೇಳಿದರು: "ಅದು ಶ್ರೇಷ್ಠ ಯಶಸ್ಸಾಗುವುದು, ಆದರೆ ಅದು ಅಧಿಮಾನಸ ಸೃಷ್ಟಿ. ಮತ್ತು ನಾವು ಬಯಸುತ್ತಿರುವುದು ಯಶಸ್ಸನ್ನಲ್ಲ. ನಾವು ಪೃಥ್ವಿಯ ಮೇಲೆ ಅತಿ ಮನಸ್ಸನ್ನು (supermind) ಸ್ಥಾಪಿಸಲು ಬಯಸುತ್ತೇವೆ. ಹೊಸದಾದ ಅತಿಮಾನಸ ಜಗತ್ತನ್ನು, ಅದರ ಸಮಗ್ರತೆಯಲ್ಲಿ ಸೃಷ್ಟಿಸುವುದಕ್ಕಾಗಿ ಮನುಷ್ಯ ಕೂಡಲೆ ದೊರಕುವ ಯಶಸ್ಸನ್ನು ಹೇಗೆ ತ್ಯಾಗ ಮಾಡಬೇಕು ಎಂಬುದನ್ನು ತಿಳಿದುಕೊಂಡಿರಬೇಕು."

ನನ್ನ ಆಂತರಿಕ ಪ್ರಜ್ಞೆಯಿಂದ ನಾನು ಕೂಡಲೆ ತಿಳಿದುಕೊಂಡೆ: ಕೆಲವು ಗಂಟೆಗಳ ನಂತರ ಆ ಸೃಷ್ಟಿ ಹೊರಟು ಹೋಗಿತ್ತು ... ಮತ್ತು ಆ ಕ್ಷಣದಿಂದ ಇನ್ನಿತರ ಆಧಾರಗಳ ಮೇಲಿಂದ ನಾವು ಹೊಸದಾಗಿ ಪ್ರಾರಂಭಿಸಿದೆವು.

**(CWM, 9/149–51)** **– ಶ್ರೀಮಾತೆ**

*



**ಸಾವಿತ್ರಿ ಕುರಿತು ಶ್ರೀಮಾತೆಯವರು**

ಇವು ಅವರು ಜೀವಿಸಿದ ಅನುಭವಗಳು, ನೈಜತೆಗಳು ಹಾಗೂ ವಿಶ್ವಾತೀತ ಸತ್ಯ. ಅವರು ಇವುಗಳನ್ನೆಲ್ಲ ಮನುಷ್ಯ ಭೌತಿಕವಾಗಿ ಸಂತೋಷ, ದುಃಖಗಳನ್ನು ಅನುಭವಕ್ಕೆ ತಂದುಕೊಳ್ಳುವ ರೀತಿಯಲ್ಲಿ ತೆಗೆದುಕೊಂಡಿದ್ದರು. ಅವರು ಅಚೇತನದ ಕಾರ್ಗತ್ತಲೆಯಲ್ಲಿ, ಮೃತ್ಯುವಿನ ನೆರೆಹೊರೆಯಲ್ಲಿಯೂ ಕೂಡ ಅಲೆದಾಡಿದ್ದರು, ನರಕದ ಯಾತನೆಗಳನ್ನು ತಾಳಿಕೊಂಡಿದ್ದರು. ಸಾರ್ವಭೌಮ ಹರವಿನಲ್ಲಿ ಉಸಿರಾಡಿಸಲು, ಪರಮೋಚ್ಚ ಆನಂದದಲ್ಲಿ ಪ್ರವೇಶಿಸಲು ಅವರು ಜಗತ್ತಿನ ದುಃಸ್ಥಿತಿಯ ಮಣ್ಣಿನೊಳಗಿಂದ ಹೊರಹೊಮ್ಮಿ ಬಂದರು. ಈ ಎಲ್ಲ ಲೋಕಗಳನ್ನು ದಾಟಿ ಹೋದರು. ಪರಿಣಾಮಗಳನ್ನು ಎದುರಿಸುತ್ತ ಸಾಗಿ ಹೋದರು. ಮನುಷ್ಯ ಕಲ್ಪನೆ ಮಾಡಿಕೊಳ್ಳಲು ಸಾಧ್ಯವಿರದಂತಹ ವೇದನೆಗೆ ಒಳಗಾದರು, ಅದನ್ನು ತಾಳಿಕೊಂಡರು. ಇಂದಿನವರೆಗೆ ಬೇರೆ ಯಾರೂ ಅವರ ಹಾಗೆ ವೇದನೆಗೆ ಒಳಗಾದವರಿಲ್ಲ. ವೇದನೆಯನ್ನು ಸಂತೋಷವನ್ನಾಗಿ ಪರಿವರ್ತಿಸುವುದಕ್ಕಾಗಿ ಮತ್ತು ಪರಮೋಚ್ಚನೊಡನೆ ಏಕತೆ ಪಡೆಯುವುದಕ್ಕಾಗಿ ಅವರು ವೇದನೆಯನ್ನು ಸ್ವೀಕರಿಸಿದರು. ಇದು ಅನನ್ಯವಾದದ್ದು, ಜಗತ್ತಿನ ಇತಿಹಾಸದಲ್ಲಿ ಇದಕ್ಕೆ ಹೋಲಿಸಬಹುದಾದ ಬೇರೊಂದು ಘಟನೆಯಿಲ್ಲ. ಇದು ಹಿಂದೆಂದೂ ಸಂಭವಿಸಿರದ ಏನೋ ಒಂದಾಗಿದೆ. ಅತಿಮಾನಸದತ್ತ ನಾವು ನಿಶ್ಚಿತತೆಯಿಂದ ಹೆಜ್ಜೆ ಇಡಲು ಶಕ್ತರಾಗುವುದಕ್ಕಾಗಿ ಅಜ್ಞಾತದಲ್ಲಿ ಮಾರ್ಗವನ್ನು ಗುರುತಿಸಿದ ಮೊದಲ

ವ್ಯಕ್ತಿ ಇವರಾಗಿದ್ದಾರೆ. ಅವರು ಆ ಕಾರ್ಯವನ್ನು ನಮಗೆ ಸುಲಭವಾದದ್ದನ್ನಾಗಿ ಮಾಡಿದ್ದಾರೆ. 'ಸಾವಿತ್ರಿ'ಯಲ್ಲಿ ಅವರ 'ಪರಿವರ್ತನೆ ಯೋಗ' ಕುರಿತು ಪೂರ್ತಿ ವಿವರಗಳಿವೆ ಮತ್ತು ಈ ಯೋಗ ಪೃಥ್ವಿ–ಪ್ರಜ್ಞೆಯಲ್ಲಿ, ಈಗ, ಮೊದಲ ಸಲ ಕಾಣಿಸಿಕೊಂಡಿದೆ.

**(ಮೋನಾ ಸರ್ಕಾರ ಜೊತೆ ಶ್ರೀಮಾತೆಯವರ ಮಾತುಕತೆ)**

*

**ಶ್ರೀ ಅರವಿಂದರು ನಿಶ್ಚಲ ನೀರವತೆಯನ್ನು ನೀಡಿದ್ದು**

ಯಾರೋ ಒಬ್ಬರಿಗೆ ಶ್ರೀ ಅರವಿಂದರು ನಿಶ್ಚಲ ನೀರವತೆಯನ್ನು ನೀಡಿದಂತಹ ಸಂದರ್ಭಗಳನ್ನು ನಾನು ನೋಡಿದ್ದೇನೆ. ಒಬ್ಬ ವ್ಯಕ್ತಿಯ ಮನಸ್ಸು ನಿಶ್ಚಲ ನೀರವತೆ–ಯಲ್ಲಿರುವಂತೆ ಅವರು ಮಾಡಿದ್ದರು. ಆ ವ್ಯಕ್ತಿ ಅವರ ಬಳಿ ಮರಳಿ ಬಂದು ಒಂದು ಬಗೆಯ ನಿರಾಶೆಯಿಂದ ಹೇಳಿದ: "ಆದರೆ ನಾನು ಹೆಡ್ಡನಾಗಿಬಿಟ್ಟಿದ್ದೇನೆ." ಏಕೆಂದರೆ ಅವನ ಯೋಚನೆ ಈ ನಂತರ ಉದ್ರೇಕಕ್ಕೊಳಗಾಗುತ್ತಿರಲಿಲ್ಲ. ... ಜನರಿಗೆ ಸ್ವಾತಂತ್ರ್ಯ ಬೇಕಾಗಿರುತ್ತದೆ, ಆದರೆ ಅವರು ತಮ್ಮ ಸರಪಳಿಗಳೊಂದಿಗೆ ಪ್ರೇಮ–ವನ್ನಿರಿಸಿಕೊಂಡಿರುತ್ತಾರೆ. ಮನುಷ್ಯ ಆ ಸರಪಳಿಗಳನ್ನು ತೆಗೆದುಹಾಕಬೇಕೆಂದಿದ್ದಾಗ, ಅವರಿಗೆ ನಿಜವಾದ ಮುಕ್ತಿಯ ಮಾರ್ಗವನ್ನು ತೋರಿಸಿಕೊಡಬೇಕೆಂದಿದ್ದಾಗ, ಅವರಿಗೆ ಭಯವುಂಟಾಗುತ್ತದೆ ಮತ್ತು ಬಹಳಷ್ಟು ಸಲ ಅವರು ವಿರೋಧ ವ್ಯಕ್ತಪಡಿಸುತ್ತಾರೆ.

**(CWM, 9/28)** **– ಶ್ರೀಮಾತೆ**

*

**ಸೂಕ್ಷ್ಮ ಭೌತಿಕ ಹಸ್ತ**

ಇದನ್ನು ಶ್ರೀ ಅರವಿಂದರು ಒಬ್ಬ ವ್ಯಕ್ತಿಯಲ್ಲಿ ಕೈಕೊಂಡದ್ದನ್ನು ನಾನು ನೋಡಿದ್ದೇನೆ. ಆ ವ್ಯಕ್ತಿಯ ದೂರು ತಾನು ಯೋಚನೆಗಳಿಂದ ತೊಂದರೆ–ಗೊಳಗಾಗಿದ್ದೆ ಎಂಬುದಾಗಿತ್ತು. ಶ್ರೀ ಅರವಿಂದರ ಹಸ್ತ ಹೊರಗೆ ಚಾಚಿ ಬಂದಿತು, ಆ ವ್ಯಕ್ತಿಯ ತಲೆಯಲ್ಲಿ ನರ್ತನ ಮಾಡುತ್ತಿದ್ದ ಕಪ್ಪು ವಸ್ತುವೊಂದನ್ನು (ಶ್ರೀಮಾತೆಯವರು ಅದರನ್ನು ಬೆರಳುಗಳಿಂದ ಹಿಡಿದು ತೆಗೆದ ಸಂಜ್ಞೆ ಮಾಡುತ್ತಾರೆ), ಒಂದು ಹುಳವನ್ನು ಎತ್ತಿ ತೆಗೆಯುವ ಹಾಗೆ ಅವರು ಎತ್ತಿ ತೆಗೆದು ದೂರ ಚೆಲ್ಲಿ ಬಿಟ್ಟರು. ಆದದ್ದು ಅದಷ್ಟೇ. ಎಲ್ಲವೂ ನಿಶ್ಚಲ, ಅಚಂಚಲ ಹಾಗೂ



ಪ್ರಕಾಶಮಯವಾಯಿತು. ಈ ರೀತಿ ಅದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು, ಅವರು ಏನನ್ನೂ ಹೇಳದೆ ಅದನ್ನು ಹೊರಗೆ ತೆಗೆದು ಹಾಕಿದರು – ಮತ್ತು ಅದು ಕೊನೆಗೊಂಡಿತು.

ವಿಷಯಗಳು ನಿಕಟವಾಗಿ ಪರಸ್ಪರಾವಲಂಬಿಗಳಾಗಿರುತ್ತವೆ. ತನ್ನ ದೇಹದಲ್ಲಿ ಎಲ್ಲಿಯೋ ತೀಕ್ಷ್ಣ ನೋವಿದ್ದ ವ್ಯಕ್ತಿಯೊಬ್ಬ ಅವರ ಬಳಿ ಬಂದದ್ದನ್ನು ನಾನು ನೋಡಿದ್ದೇನೆ. "ಓಹ್ ಇಲ್ಲಿ ನೋಯುತ್ತದೆ" ಎಂದು ಆ ವ್ಯಕ್ತಿ ಹೇಳಿದ. ಅವರು ಏನನ್ನೂ ಹೇಳದೆ, ಸ್ಥಿರವಾಗಿ ಕುಳಿತು ಆ ವ್ಯಕ್ತಿಯತ್ತ ನೋಡಿದರು. ಸೂಕ್ಷ್ಮ ಭೌತಿಕದಿಂದ ಒಂದು ಹಸ್ತ ಹೊರಬಂದದ್ದನ್ನು ನೋಡಿದೆ. ಅವ್ಯವಸ್ಥೆ ಮತ್ತು ಗೊಂದಲವಿರುವುದರ ಸುತ್ತ ನರ್ತಿಸುತ್ತಿದ್ದ ಚಿಕ್ಕ ವಸ್ತುವನ್ನು ನಾನು ನೋಡಿದೆ. ಅವರು ಅದನ್ನು ಹೀಗೆ (ಹುಳವನ್ನು ಎತ್ತಿ ತೆಗೆಯುವ ಹಾಗೆ) ಹೊರಗೆ ತೆಗೆದರು. ಅಲ್ಲಿ ಎಲ್ಲ ನೋವು ಹೊರಟು ಹೋಗಿತ್ತು.

"ಓಹ್, ಇಲ್ಲಿ ನೋಡಿರಿ, ಎಲ್ಲ ನೋವೂ ಹೋಗಿಬಿಟ್ಟಿದೆ" ಎಂದು ಆ ವ್ಯಕ್ತಿ ಹೇಳಿದ.

**(CWM, 9/253–54)** **– ಶ್ರೀಮಾತೆ**

*

**ಸೆರೆಮನೆ ದೇವನನ್ನು ಭೇಟಿ ಮಾಡುವ ಸ್ಥಳವಾಗುವಂತೆ ತಿರುವು ಕೊಟ್ಟದ್ದು**

ನಾನು ಅವಿದ್ಯೆಯಲ್ಲಿ ನಿದ್ರಿಸುತ್ತಿರುವಾಗ ಸಾಧುಸಂತರು ಧ್ಯಾನ ಕೈಕೊಳ್ಳುತ್ತಿದ್ದ ಸ್ಥಳವೊಂದರತ್ತ ಬಂದೆ. ಅವರೊಡನೆ ಕೈಕೊಂಡ ಸಹವಾಸ ನಾನು ದಣಿದು–ಕೊಳ್ಳುವಂತೆ ಮಾಡಿತು. ಮತ್ತು ಆ ಸ್ಥಳ ಸೆರೆಮನೆ ಇದ್ದ ಹಾಗಿತ್ತು. ನಾನು ಎಚ್ಚತ್ತುಕೊಂಡಾಗ ದೇವ ನನ್ನನ್ನು ಸೆರೆಮನೆಗೆ ಕರೆದುಕೊಂಡು ಹೋದ. ಮತ್ತು ಅದನ್ನು ಧ್ಯಾನಕ್ಕೆ ಯೋಗ್ಯವಾದ ಹಾಗೂ ಅವನೊಡನೆ ಪೂರ್ವ ಯೋಜಿತ ಭೇಟಿಯ ಸ್ಥಳವಾಗುವಂತೆ ತಿರುವು ನೀಡಿದ.

**(ಚಿಂತನಗಳು ಹಾಗೂ ಸೂಕ್ತಿಗಳು, ನಂ. 47)** **– ಶ್ರೀ ಅರವಿಂದರು**

*

ಇಲ್ಲಿ ಶ್ರೀ ಅರವಿಂದರು ತಮಗೆ ಅಲಿಪುರ ಜೇಲಿನಲ್ಲಾದ ಅನುಭವ ಕುರಿತು ಹೇಳುತ್ತಾರೆ. ಆದರೆ ಈ ಸೂಕ್ತಿಯಲ್ಲಿ ಸ್ವಾರಸ್ಯಕರವಾದ ಸಂಗತಿ ಹೀಗಿದೆ: ಅಲ್ಲಿ ಅವರ ದೇಹ ಹೊರಗೆಲ್ಲೂ ಚಲಿಸದ ಹಾಗೆ ಇರಬೇಕಾದ ನಿರ್ಬಂಧಕ್ಕೊಳಗಾಗಿತ್ತು,

ಆದರೆ ಅವರ ಆತ್ಮವು ಸಾಮಾಜಿಕ ರೂಢಿಗಳು, ಸಾಮಾಜಿಕ ಸಂಪ್ರದಾಯಗಳು, ಪೂರ್ವ ಗ್ರಹಗಳು ಮತ್ತು ಮೊದಲು ಕಲ್ಪಿಸಿಕೊಂಡ ಎಲ್ಲ ವಿಚಾರಗಳು ಮತ್ತು ಎಲ್ಲ ಸಿದ್ಧಾಂತಗಳ ಸೀಮಿತತೆಗಳು ಇವೆಲ್ಲವುಗಳ ಬೇಡಿಗಳಿಂದ ಮುಕ್ತವಾಗಿತ್ತು, ಭಗವಂತನೊಡನೆ ನೇರ ಮತ್ತು ಪ್ರಜ್ಞಾಪೂರ್ಣ ಸಂಪರ್ಕ ಉಂಟಾಗಿತ್ತು ಮತ್ತು ಸಮಗ್ರ ಯೋಗ ಕುರಿತು ಅವರಿಗೆ ಮೊದಲ ಜ್ಞಾನಪ್ರಕಾಶನ ದೊರೆತಿತ್ತು ಮತ್ತು ಇನ್ನೊಂದೆಡೆಗೆ ಜೀವನವನ್ನು ಹೊರಗಿರಿಸುವ, ಸಂಕುಚಿತ ಶಾಸನಗಳಿರುವ ಮಾನಸಿಕ ಸೆರೆಮನೆಯಿತ್ತು, ಆಧ್ಯಾತ್ಮಿಕ ಜೀವನದಲ್ಲಿ ತಮ್ಮನ್ನು ಸಾಂಪ್ರದಾಯಿಕ ಮತ ತತ್ವಗಳ ಆಧಾರದ ಮೇಲೆ ತೊಡಗಿಸಿಕೊಳ್ಳಬೇಕೆಂಬ ಜನರು, ಸಾಮಾನ್ಯ ಜೀವನವನ್ನು ತ್ಯಾಗ ಮಾಡಿದ ನಂತರ ಆ ಸೆರೆಮನೆಯಲ್ಲಿ ಸೇರಿಕೊಳ್ಳುತ್ತಾರೆ.

**(CWM, 10/68–69)** **– ಶ್ರೀಮಾತೆ**

*

**ಅತಿಮಾನಸ ದೈವೀ ಏಕತೆ**

ಕೈದಿಗಳಲ್ಲಿ, ಅಂಗರಕ್ಷಕರಲ್ಲಿ ಹಾಗೂ ಎಲ್ಲೆಡೆಯಲ್ಲಿ ಶ್ರೀ ಅರವಿಂದರು ನಾರಾಯಣನನ್ನು ನೋಡಿ ಪಡೆದ ಅನುಭವದ ಬಗ್ಗೆ ನಿಮಗೆ ತಿಳಿದಿದೆಯೆ?

ಅದು ಪರಮೋಚ್ಚ ಏಕತೆ.

**ಪ್ರಶ್ನೆ :** ಅದು ಅತಿಮಾನಸ ಅನುಭವವೆ?

**ಶ್ರೀಮಾತೆ :** ಅದು ಅತಿಮಾನಸ ಅನುಭವ.

ಹೌದು, ಅತಿಮಾನಸ ಅನುಭವ. ಅವರು ಅದನ್ನು ನಾರಾಯಣ ಎಂದು ಕರೆದರು.

**ಪ್ರಶ್ನೆ :** ಅದು ಅತಿಮಾನಸದ್ದು, ಅಧಿಮಾನಸದ್ದಲ್ಲ.

**ಶ್ರೀಮಾತೆ :** ಇಲ್ಲ, ಇಲ್ಲ.

ಶ್ರೀ ಅರವಿಂದರು ವಿವರಣೆ ಕೊಟ್ಟ ಹಾಗೆ ಅದು ಗೀತೆಯ ಸಂದೇಶವಿದ್ದ ಹಾಗೆ; ಅಧಿಮಾನಸದ್ದಲ್ಲ. ಅದು ದೈವೀ ಏಕತೆ, ದೈವೀ ಏಕತೆಯ ಅನುಭವ.

**(ಅನುಯಾಯಿಯೊಬ್ಬನೊಂದಿಗೆ ನಡೆಸಿದ ಮಾತುಕತೆ)** **– ಶ್ರೀಮಾತೆ**

*




ಎರಡು ವಿಷಯಗಳನ್ನು ನೀವು ಎಂದಿಗೂ ಮರೆಯಬಾರದು: ಶ್ರೀ ಅರವಿಂದರ ಕರುಣೆ ಮತ್ತು ಶ್ರೀಮಾತೆಯವರ ಪ್ರೇಮ, ಇವೆರಡ–ರೊಂದಿಗೆ ಶತ್ರುಗಳನ್ನು ನಿಶ್ಚಿತವಾಗಿ ಸದೆಬಡಿದು ಸದಾಕಾಲಕ್ಕೆ ವಿಜಯ ಗಳಿಸುವವರೆಗೆ ಏಕಪ್ರಕಾರವಾಗಿ, ತಾಳ್ಮೆಯಿಂದ ಹೋರಾಡುತ್ತ ಸಾಗಬೇಕು.

ಬಾಹ್ಯದಲ್ಲಿ ಧೈರ್ಯವಿರಬೇಕು, ಅಂತರಂಗದಲ್ಲಿ ಶಾಂತಿಯಿರಬೇಕು, ದೈವೀಕೃಪೆಯಲ್ಲಿ ಅಲುಗಾಡದ ವಿಶ್ವಾಸವಿರಬೇಕು.

**(CWM, 15/81)** **– ಶ್ರೀಮಾತೆ**

*



ನಾವು ನಿನ್ನೆ ನೋಡಿದ ವ್ಯಕ್ತಿ ಪೃಥ್ವಿಯ ಮೇಲಿದ್ದಾರೆ. ಒಂದು ದಿನ ಬರಲಿದೆ, ಆಗ ಎಲ್ಲ ಅಂಧಕಾರ ಪ್ರಕಾಶವಾಗಿ ಪರಿವರ್ತನೆಗೊಳ್ಳುವುದು ಮತ್ತು ಭಗವಂತ, ನಿನ್ನ ಆಳಿಕೆಯನ್ನು ಪೃಥ್ವಿಯ ಮೇಲೆ ಸ್ಥಾಪಿಸಲಾಗುವುದು ಎಂಬುದನ್ನು ಕುರಿತು ಪ್ರಮಾಣ ನೀಡುವುದಕ್ಕೆ ಆ ವ್ಯಕ್ತಿಯ ಸಾನ್ನಿಧ್ಯ ಸಾಕಷ್ಟಾಗುತ್ತದೆ.

**(CWM, 1/113)** **– ಶ್ರೀಮಾತೆ**

*

# ದೈವೀ ಬಲಿದಾನ

## ದೇಹ ತ್ಯಜಿಸಿ ಹೊರಟು ಹೋಗುವಿಕೆಗೆ ಆಂತರಿಕ ಕಾರಣ

ಶ್ರೀ ಅರವಿಂದರು ತಮ್ಮ ದೇಹ ಕುರಿತು ತೆಗೆದುಕೊಂಡ ನಿರ್ಣಯಕ್ಕೆ ಪೃಥ್ವಿಯ ಹಾಗೂ ಮಾನವರ ಸ್ವೀಕೃತಿಯಲ್ಲಿ ಕಂಡುಬಂದ ಕೊರತೆ ಹೆಚ್ಚಾಗಿ ಹೊಣೆಗಾರ–ವಾಗಿದೆ. ಆದರೆ ಒಂದು ವಿಷಯ ನಿಶ್ಚಿತ: ಭೌತಿಕ ಸ್ತರದ ಮೇಲೆ ಸಂಭವಿಸಿದ್ದು ಅವರ ಬೋಧನೆಯ ಸತ್ಯದ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಅವರು ಹೇಳಿದ್ದೆಲ್ಲ ಪರಿಪೂರ್ಣವಾಗಿ ಸತ್ಯವಾಗಿದೆ ಮತ್ತು ಅದು ಹಾಗೆ ಉಳಿದುಕೊಳ್ಳುತ್ತದೆ. ಕಾಲಗತಿ ಹಾಗೂ ಘಟನೆಗಳ ಮುನ್ನಡೆ ಅದನ್ನು ಪ್ರಮಾಣೀಕರಿಸುವವು.

**(CWM, 13/7)** **– ಶ್ರೀಮಾತೆ**

*

ಆಶ್ರಮದಲ್ಲಿ ನೀನು ಹಂಚುತ್ತಿರುವ ಹಸ್ತ ಪ್ರತಿಯಲ್ಲಿಯ ಭಾಷಾಂತರದ ಬಗ್ಗೆ ಕೇಳಿದಾಗ ನನಗೆ ನೋವನ್ನುಂಟು ಮಾಡುವಷ್ಟು ಆಘಾತವಾಯಿತು. ನಮಗಾಗಿ ಇಡಿಯಾಗಿ ಬಲಿದಾನ ಮಾಡಿದ ನಮ್ಮ ಪ್ರಭುವನ್ನು ಕುರಿತು ನಿನ್ನಲ್ಲಿ ತಿಳಿವಳಿಕೆ, ಭಕ್ತಿ ಹಾಗೂ ಗೌರವ ಇವುಗಳ ಬಗ್ಗೆ ಸಂಪೂರ್ಣ ಕೊರತೆ ಇದ್ದಿತೆಂದು ನಾನು ಎಂದೂ ಕಲ್ಪನೆ ಮಾಡಿಕೊಂಡಿರಲಿಲ್ಲ. ಶ್ರೀ ಅರವಿಂದರು ಎಂದಿಗೂ ಶಕ್ತಿಗುಂದಿರಲಿಲ್ಲ. ಅವರು ದೇಹತ್ಯಾಗ ಮಾಡುವುದಕ್ಕಿಂತ ಕೆಲವು ಗಂಟೆಗಳ ಮೊದಲು ತಮ್ಮ ಹಾಸಿಗೆಯಿಂದ ಮೇಲೆದ್ದು ಬಂದು ತಮ್ಮ ಆರಾಮ ಕುರ್ಚಿಯಲ್ಲಿ ದೀರ್ಘಕಾಲ ಕುಳಿತಿದ್ದರು, ತಮ್ಮ ಸುತ್ತುಮುತ್ತ ಇದ್ದವರ ಜೊತೆಗೆ ಮುಕ್ತವಾಗಿ ಮಾತನಾಡಿದರು. ಶ್ರೀ ಅರವಿಂದರು ದೇಹತ್ಯಾಗ ಮಾಡಬೇಕಾದ ಒತ್ತಾಯಕ್ಕೊಳಗಾಗಿರಲಿಲ್ಲ, ಅವರು ಹಾಗೆ ಮಾಡುವುದನ್ನು ತಾವೇ ಆಯ್ದುಕೊಂಡರು, ಅದಕ್ಕೆ ಕಾರಣಗಳು ಎಷ್ಟೊಂದು ಘನತೆವೆತ್ತ ರೀತಿಯಲ್ಲಿವೆ ಎಂದರೆ ಅವು ಮಾನವ ಮಾನಸಿಕತೆ(mentality)ಗೆ ನಿಲುಕದಷ್ಟು ದೂರದಲ್ಲಿ ಆಚೆಗಿವೆ.

ಅರ್ಥಮಾಡಿಕೊಳ್ಳಲು ಸಾಧ್ಯವಾಗದೇ ಇದ್ದಾಗ ಮನುಷ್ಯ ಕೈಕೊಳ್ಳಬಹುದಾದ ಒಂದೇ ಕಾರ್ಯವೆಂದರೆ ಗೌರವಪೂರ್ಣ ಮೌನದಿಂದ ಉಳಿದುಕೊಳ್ಳುವುದಾಗಿದೆ.

**(CWM, 13/7–8)** **– ಶ್ರೀಮಾತೆ**

*



ತಮ್ಮ ದೇಹದಲ್ಲಿಯೇ ಸಿದ್ಧಿಪಡೆಯುವುದನ್ನು ತ್ಯಾಗಮಾಡುವ ಪರಮೋಚ್ಚ ನಿಸ್ವಾರ್ಥದ ಕ್ರಿಯೆಯ ರೂಪದಲ್ಲಿ ಶ್ರೀ ಅರವಿಂದರು ತಮ್ಮ ದೇಹತ್ಯಾಗ ಮಾಡಿದ್ದಾರೆ, ಅದು ಸಾಮೂಹಿಕ ಸಿದ್ಧಿಯನ್ನು ತ್ವರಿತಗೊಳಿಸುವುದಕ್ಕಾಗಿದ್ದಿತು. ಪೃಥ್ವಿ ಹೆಚ್ಚಿನ ರೀತಿಯಲ್ಲಿ ಪ್ರತಿಸ್ಪಂದಿಸುತ್ತಿದ್ದರೆ ಈ ಬಲಿದಾನ ಅವಶ್ಯವಾಗುತ್ತಿರಲಿಲ್ಲ.

**(CWM, 13/9)** **– ಶ್ರೀಮಾತೆ**

*

## ಶ್ರೀ ಅರವಿಂದರು ನೀಡಿರುವ ಭರವಸೆ

ಏನನ್ನು ಕುರಿತು ಶ್ರೀ ಅರವಿಂದರು ಭರವಸೆ ನೀಡಿದ್ದಾರೆ ಮತ್ತು ಸ್ವಾಭಾವಿಕವಾಗಿ, ಇಲ್ಲಿರುವ ನಮಗೆ ಯಾವುದು ಸ್ವಾರಸ್ಯಕರವಾಗಿದೆ ಎಂಬುದು ಹೀಗಿದೆ: ಆಧ್ಯಾತ್ಮೀಕರಣಕ್ಕೆ ಅವಶ್ಯವಾದ ಷರತ್ತುಗಳನ್ನು ನೆರವೇರಿಸುವ ಮನುಕುಲದ ಗಣ್ಯರಲ್ಲಿ[2] ಕೆಲವರು ಅತಿಮಾನಸ ಶಕ್ತಿ, ಪ್ರಜ್ಞೆ ಹಾಗೂ ಪ್ರಕಾಶ ಇವುಗಳ ಸಹಾಯದಿಂದ ತಮ್ಮ ದೇಹಗಳನ್ನು ಪರಿವರ್ತನೆಗೆ ಒಳಪಡಿಸಲು ಶಕ್ತರಾಗುವರು, ಅದರಿಂದಾಗಿ ಅವರು ಇನ್ನು ಮುಂದೆ ಪಶು–ಮಾನವರಾಗಿರದೆ ಅತಿಮಾನವರಾಗುವರು.

ಅತಿಮಾನಸ ಶಕ್ತಿ ಪೃಥ್ವಿಯ ಮೇಲೆ ಪ್ರಕಟವಾಗುವ ಹಂತದಲ್ಲಿದೆ ಎಂಬುದರ ಜ್ಞಾನ ಶ್ರೀ ಅರವಿಂದರಲ್ಲಿತ್ತು, ಅದರ ಆಧಾರದ ಮೇಲೆ ಅವರು ಆ ಭರವಸೆಯನ್ನು ನೀಡಿದ್ದರು. ವಾಸ್ತವದಲ್ಲಿ, ಬಹಳ ಕಾಲದ ಹಿಂದೆ ಅತಿಮಾನಸ ಶಕ್ತಿ ಅವರಲ್ಲಿ ಅವರೋಹಣ ಮಾಡಿತ್ತು, ಅದನ್ನು ಮತ್ತು ಅದು ಉಂಟುಮಾಡಬಹುದಾದ ಪರಿಣಾಮಗಳನ್ನು ಅವರು ತಿಳಿದುಕೊಂಡಿದ್ದರು.

---

2 ತನ್ನನ್ನು ತಿಳಿದುಕೊಂಡವನು ಹಾಗೂ ವಶದಲ್ಲಿಟ್ಟುಕೊಂಡವನು, ತನ್ನಲ್ಲಿರುವ ಎಲ್ಲ ವೈರುಧ್ಯಗಳ ಮೇಲೆ ಜಯ ಸಾಧಿಸಿರುವವನು ಮತ್ತು ಆ ವಾಸ್ತವತೆಯಿಂದಾಗಿ ತನ್ನನ್ನು ಹಾಗೂ ತನ್ನ ವಿಜಯವನ್ನು ವಿಸ್ತರಿಸಿಕೊಂಡವನು, ಅದರಿಂದಾಗಿ ಇತರರು ಅಂತಹ ಇಲ್ಲವೆ ಅದೇ ಬಗೆಯ ವಿಜಯ ಸಾಧಿಸುವುದನ್ನು ಸುಲಭವನ್ನಾಗಿ ಮಾಡಿದವನು ಗಣ್ಯನಾಗಿರುತ್ತಾನೆ. ತಮ್ಮಂತರಂಗದಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸುವುದರ ಮೂಲಕ ಇತರರು ಜಯ ಕಂಡುಕೊಳ್ಳಲು ಸಹಾಯ ಮಾಡುವವರು ಅಗ್ರಗಾಮಿಗಳು ಇಲ್ಲವೆ ಗಣ್ಯರಾಗಿರುತ್ತಾರೆ.

ಅತಿಮಾನಸ ವಿಶ್ವಂಭರವಾಗಿ ಈಗ ಪ್ರಕಟವಾಗಿರುವುದರಿಂದ, ಸರ್ವ–ಸಾಧಾರಣವಾಗಿ ನಾನು ಹೇಳಬಹುದಾದುದು ಹೀಗಿದೆ: ಪರಿವರ್ತನೆ ಸಾಧ್ಯವಾಗುವುದರ ನಿಶ್ಚಿತತೆ, ಸಹಜವಾಗಿ, ಇನ್ನೂ ಹೆಚ್ಚಾಗಿದೆ. ಆ ಷರತ್ತುಗಳನ್ನು ನೆರವೇರಿಸಲಿರುವವರು ಮತ್ತು ನೆರವೇರಿಸಿದವರು ಪರಿವರ್ತನೆಯ ಮಾರ್ಗ–ದಲ್ಲಿದ್ದಾರೆ ಎಂಬುದರ ಬಗ್ಗೆ ಇನ್ನು ಮುಂದೆ ಯಾವ ಸಂಶಯವೂ ಇರುವುದಿಲ್ಲ.

ಯೋಗ ಸಮನ್ವಯ ಗ್ರಂಥದಲ್ಲಿ ಶ್ರೀ ಅರವಿಂದರು ಆ ಷರತ್ತುಗಳನ್ನು ವಿವರವಾಗಿ ಕೊಟ್ಟಿದ್ದಾರೆ. ಅತಿಮಾನಸದ ಪ್ರಕಟಣೆ ಕುರಿತು ಅವರು ಬರೆದಿರುವ ಕೊನೆಯ ಲೇಖನಗಳಲ್ಲಿ ಇನ್ನೂ ಹೆಚ್ಚಿನ ವಿವರಗಳಿವೆ. ಹಾಗಾಗಿ ಅದು ಈಗ ಕೇವಲ ಸಿದ್ಧಿಸಿಕೊಳ್ಳುವುದರ ಪ್ರಶ್ನೆಯಾಗಿದೆ.

**(CWM, 8/322)** **– ಶ್ರೀಮಾತೆ**

*

ಜಗತ್ತಿಗಾಗಿ ಶ್ರೀ ಅರವಿಂದರು ಎಂತಹ ಮಹತ್ತರವಾದ ಬಲಿದಾನವನ್ನು ಮಾಡಿದ್ದಾರೆ ಎಂಬುದನ್ನು ಜನರು ತಿಳಿದಿಲ್ಲ. ಒಂದು ವರ್ಷದ ಹಿಂದೆ ಶ್ರೀ ಅರವಿಂದರ ಜೊತೆಗೆ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದಾಗ ಈ ದೇಹವನ್ನು ತ್ಯಜಿಸಬೇಕೆಂಬ ಭಾವನೆ ನನಗೆ ಬರುತ್ತಿದೆ ಎಂದು ಅವರಿಗೆ ಹೇಳಿದೆ. ಆಗ ಅವರು "ಇಲ್ಲ, ಅವಶ್ಯವಾದರೆ ಈ ಪರಿವರ್ತನೆಗಾಗಿ ನಾನು ದೇಹ ತ್ಯಜಿಸುವೆ. ಅತಿಮಾನಸದ ಅವತರಣ ಹಾಗೂ ಪರಿವರ್ತನೆ ಇವುಗಳಿರುವ ಯೋಗವನ್ನು ನೀವು ನೆರವೇರಿಸಬೇಕು" ಎಂದು ಹೇಳಿದರು.

**(CWM, 13/8)** **– ಶ್ರೀಮಾತೆ**

*

ಅವರು ತಮ್ಮ ದೇಹದಲ್ಲಿ ಅತಿಮಾನಸ ಶಕ್ತಿಯನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿದ್ದರು. ಅವರು ದೇಹತ್ಯಾಗ ಮಾಡಿದ ನಂತರ ದೇಹ ಇನ್ನೂ ಹಾಸಿಗೆಯ ಮೇಲಿದ್ದಾಗ ನಾನು ಅವರ ಪಕ್ಕದಲ್ಲಿ ನಿಂತಿದ್ದೆ. ಒಟ್ಟಿನಲ್ಲಿ ಅತ್ಯಂತ ಮೂರ್ತ–ರೂಪದಲ್ಲಿ – ಅದರೊಂದಿಗೆ ಎಷ್ಟೊಂದು ಬಲವತ್ತರವಾದ ಸಂವೇದನೆಯಿತ್ತೆಂದರೆ ಮನುಷ್ಯ ಅದನ್ನು ನೋಡಬಹುದೇನೋ ಎಂದು ಯೋಚಿಸುವಂತಿತ್ತು – ಅವರಲ್ಲಿ ಸಂಗ್ರಹವಾಗಿದ್ದ ಎಲ್ಲ ಅತಿಮಾನಸ ಶಕ್ತಿ ಅವರ ದೇಹದಿಂದ ನನ್ನ ದೇಹದೊಳಗೆ ಸಾಗಿ ಬಂದಿತು, ಅದು ಸಾಗಿ ಬರುವಾಗ ಘರ್ಷಣೆಯ ಅನುಭವ ನನಗಾಯಿತು.



ಅದು ಅಸಾಧಾರಣವಾದ ಅನುಭವವಾಗಿತ್ತು. ಅದು ದೀರ್ಘಕಾಲ ನಡೆದಿತ್ತು (ಶ್ರೀಮಾತೆಯವರು ಅದು ತಮ್ಮಲ್ಲಿ ಬರುತ್ತಿದ್ದುದರ ಸಂಕೇತ ಮಾಡಿ ತೋರಿಸುತ್ತಾರೆ). ನಾನು ಅವರ ಹಾಸಿಗೆಯ ಪಕ್ಕದಲ್ಲಿ ನಿಂತಿದ್ದೆ ಮತ್ತು ಅದು ಮುಂದುವರಿಯುತ್ತ ಹೋಯಿತು.

**(CWM, 12/72)** **– ಶ್ರೀಮಾತೆ**

*

ಮಾನವ ದೇಹದಲ್ಲಿ ಅತಿಮಾನಸ ಪ್ರಜ್ಞೆಯನ್ನು ಅವತರಣ ಮಾಡಿಕೊಂಡಿದ್ದ ಶ್ರೀ ಅರವಿಂದರು, ನಾವು ಅನುಸರಿಸಬೇಕಾದ ಮಾರ್ಗದ ಸ್ವಭಾವವನ್ನು ಹಾಗೂ ಗುರಿಯನ್ನು ತಲುಪಲು ಅನುಸರಿಸಬೇಕಾದ ರೀತಿಯನ್ನು ತೆರೆದು ತೋರಿಸಿದ್ದಾರೆ; ಅಲ್ಲದೆ ವೈಯಕ್ತಿಕವಾಗಿ ತಮ್ಮಲ್ಲಿಯೇ ಸಿದ್ಧಿಯನ್ನು ಕಂಡುಕೊಳ್ಳುವುದರ ಮೂಲಕ ನಮಗೆ ಉದಾಹರಣೆ ನೀಡಿದ್ದಾರೆ, ಆ ಕಾರ್ಯವನ್ನು ಕೈಕೊಳ್ಳಬಹುದು ಮತ್ತು ಅದಕ್ಕೆ ಕಾಲ ಸನ್ನಿಹಿತವಾಗಿದೆ ಎಂಬುದಕ್ಕೆ ಪ್ರಮಾಣ ಒದಗಿಸಿದ್ದಾರೆ.

**(CWM, 12/72)** **– ಶ್ರೀಮಾತೆ**

*

**ಶ್ರೀ ಅರವಿಂದರು ಪೃಥ್ವಿಯ ಮೇಲೆ ಬಂದದ್ದೇಕೆ?**

ಅತಿಮಾನಸ ಪ್ರಕಟಣೆಯನ್ನು ಕುರಿತು ಘೋಷಿಸಲು ಮತ್ತು ಕೇವಲ ಅದಕ್ಕಾಗಿಯಷ್ಟೇ ಅಲ್ಲ, ಆದರೆ ಅತಿಮಾನಸದ ಶಕ್ತಿಯ ಭಾಗವೊಂದನ್ನು ದೇಹದಲ್ಲಿ ಧರಿಸಿ ತಮ್ಮ ಉದಾಹರಣೆಯನ್ನು ತೋರಿಸಲು ಬಂದಿದ್ದರು, ಹಾಗೆಯೇ ಆ ಉದಾಹರಣೆಯ ಮೂಲಕ ಮನುಷ್ಯ ಅದನ್ನು ಪ್ರಕಟಿಸಲು ತಯಾರಿಯ ರೂಪದಲ್ಲಿ ಏನನ್ನು ಮಾಡಬೇಕೆಂಬುದನ್ನು ತೋರಿಸಿಕೊಟ್ಟರು. ನಾವು ಕೈಕೊಳ್ಳ–ಬಹುದಾದ ಅತ್ಯಂತ ಒಳ್ಳೆಯ ಕಾರ್ಯವೆಂದರೆ ಅವರು ಹೇಳಿದ್ದೆಲ್ಲವನ್ನೂ ಅಭ್ಯಾಸ ಮಾಡುವುದಾಗಿದೆ, ಅವರ ಉದಾಹರಣೆಯನ್ನು ಅನುಸರಿಸುವುದಾಗಿದೆ ಮತ್ತು ಹೊಸ ಪ್ರಕಟಣೆಗೆ ನಮ್ಮನ್ನು ತಯಾರಿ ಮಾಡಿಕೊಳ್ಳುವುದಾಗಿದೆ.

ಇದು ಜೀವನಕ್ಕೆ ನಿಜವಾದ ಅರ್ಥ ಕೊಡುತ್ತದೆ ಮತ್ತು ಎಲ್ಲ ಅಡೆತಡೆಗಳ ಮೇಲೆ ಜಯ ಸಾಧಿಸಲು ಸಹಾಯ ಮಾಡುತ್ತದೆ.

ಹೊಸ ಸೃಷ್ಟಿಗಾಗಿ ಬದುಕಿರೋಣ, ತರುಣರು ಹಾಗೂ ಪ್ರಗತಿಶೀಲರು ಆಗಿ

ಉಳಿದುಕೊಳ್ಳುವುದರ ಮೂಲಕ ನಾವು ಹೆಚ್ಚು ಹೆಚ್ಚಾಗಿ ಬಲಿಷ್ಠರಾಗುವಂತೆ ಬೆಳೆಯುವೆವು.

**(CWM, 12/205)** **– ಶ್ರೀಮಾತೆ**

*

ನಾವು ದೈವೀ ಪ್ರಜ್ಞೆಯಲ್ಲಿ ಬೆಳೆಯಲಾಗಲೆಂದು ಶ್ರೀ ಅರವಿಂದರು ತಮ್ಮ ಜೀವನವನ್ನು ಕೊಟ್ಟರು.

**(CWM, 13/16)** **– ಶ್ರೀಮಾತೆ**

ತಮ್ಮ ಪರಿವರ್ತನೆಯ ಕಾರ್ಯಕ್ಕೆ ಹೆಚ್ಚು ಪೂರ್ತಿ ಸಹಾಯ ನೀಡಲೆಂದು ಭೌತಿಕ ಜೀವನದ ಬಲಿದಾನ ನೀಡಿದ ಅವರ ದೈವೀ ಸಾನ್ನಿಧ್ಯದಲ್ಲಿ ನಾವು ನಿಂತುಕೊಳ್ಳುತ್ತೇವೆ.

ನಾವೇನು ಕೈಕೊಳ್ಳುತ್ತಿದ್ದೇವೆ, ನಮ್ಮ ಯೋಚನೆಗಳೇನಿವೆ, ನಮ್ಮ ಭಾವನೆಗಳೇನಿವೆ, ನಮ್ಮ ಕ್ರಿಯೆಗಳೇನಿವೆ ಇವೆಲ್ಲದರ ಬಗ್ಗೆ ಅರಿವುಳ್ಳವರಾಗಿ ಅವರು ಯಾವಾಗಲೂ ನಮ್ಮ ಜೊತೆಗಿದ್ದಾರೆ.

**(CWM, 13/8)** **– ಶ್ರೀಮಾತೆ**

*

### ಶ್ರೀ ಅರವಿಂದರ ದೇಹದಲ್ಲಿದ್ದ ಅತಿಮಾನಸ ಶಕ್ತಿ

ಶ್ರೀ ಅರವಿಂದರು ಅತಿಮಾನಸ ಶಕ್ತಿಯಿಂದ ತಮ್ಮ ದೇಹವನ್ನು ಪರಿವರ್ತನೆ–ಗೊಳಿಸುವುದರಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದರು ಎಂದು ನನ್ನನ್ನು ಬಹಳಷ್ಟು ಸಲ ಕೇಳಲಾಗಿದೆ.

**ಪ್ರಶ್ನೆ :** *ಹೌದು, ಶ್ರೀಮಾತೆಯವರೆ, ನಮಗೆ ಅದನ್ನು ಕುರಿತು ಕುತೂಹಲವಿದೆ. ಆದರೆ ಅದು ನಮಗೆ ತಿಳಿದಿಲ್ಲ.*

**ಶ್ರೀಮಾತೆ :** ಆದರೆ ನಿಮ್ಮ ಚಿಕ್ಕ ಮನಸ್ಸಿನಿಂದ ಅದನ್ನು ಹೇಗೆ ತಿಳಿದುಕೊಳ್ಳಬಲ್ಲಿರಿ? ಅದರ ಬಗ್ಗೆ ಸ್ವಲ್ಪ ಅನುಭವ ತಂದುಕೊಂಡಿರದ ಯಾರೂ ಅದನ್ನು ತಿಳಿದುಕೊಳ್ಳಲಾರರು. ಅದರೆ ಅವರು ತಮ್ಮ ದೇಹದಲ್ಲಿ ಅಪಾರ ಅತಿಮಾನಸ ಶಕ್ತಿಯನ್ನು ಕೂಡಿಹಾಕಿದ್ದರೆಂದು ನಾನು ಹೇಳುತ್ತೇನೆ. ಅದೆಷ್ಟು ಅದ್ಭುತವಾದ ಕಾರ್ಯ. ಅವರು ದೇಹತ್ಯಾಗ ಮಾಡಿದ ನಂತರ ಅವರ ದೇಹ ಐದು ದಿನಗಳ



ಕಾಲ, ಬಹುಮಟ್ಟಿಗೆ, ವೈಭವೋಪೇತವಾಗಿ ಉಳಿದುಕೊಂಡಿತ್ತೆಂಬುದು ನಿಮ್ಮ ನೆನಪಿನಲ್ಲಿರಬಹುದು. ಅವರು ತಮ್ಮ ಎಲ್ಲ ಅತಿಮಾನಸ ಶಕ್ತಿಯನ್ನು ನನ್ನಲ್ಲಿ ಸುರಿದರೂ ದೇಹ ಪ್ರಕಾಶಮಯವಾಗಿ ಉಳಿದುಕೊಂಡಿತ್ತು. ಅವರು ನಮ್ಮನ್ನು ಬಿಟ್ಟುಹೋಗುವ ಮೊದಲು ಎಲ್ಲವನ್ನೂ ನನಗೆ ಕೊಟ್ಟರು. ಆದರೆ ಅವರ ದೇಹ ಇನ್ನೂ ಅತಿಮಾನಸ ವೈಭವದಿಂದ ತೇಜಸ್ಸನ್ನು ಹೊರಸೂಸುತ್ತಿತ್ತು. ಆ ಕ್ಷಣದಲ್ಲಿ, ಕೊನೆಯ ಕೆಲ ನಿಮಿಷಗಳ ಕಾಲದಲ್ಲಿ ನಾನು ಅವರ ಹಾಸಿಗೆಯ ಬಳಿ ನಿಂತಿದ್ದೆ, ನಾನು ಅತಿಮಾನಸ ಪ್ರಕಾಶ ನನ್ನಲ್ಲಿ ಪ್ರವೇಶಿಸುವುದನ್ನು ಅಕ್ಷರಶಃ ನೋಡ–ಬಲ್ಲವಳಾಗಿದ್ದೆ, ಅದು ಭೌತಿಕವಾಗಿ ಘರ್ಷಣೆಯೊಂದಿಗೆ ನನ್ನಲ್ಲಿ ಪ್ರವೇಶಿಸುತ್ತಿತ್ತು. ಅದು ಅಷ್ಟರಮಟ್ಟಿಗೆ ಮೂರ್ತಸ್ವರೂಪದ್ದಾಗಿತ್ತು, ಸೂಕ್ಷ್ಮರಂಧ್ರಗಳ ಮೂಲಕ ಅದು ಹೀಗೆ ಪ್ರವೇಶಿಸುತ್ತಿತ್ತು (ಸಂಜ್ಞೆ).

*

### ಅತ್ಯಂತ ಉದಾರವಾದ ಬಲಿದಾನ

ದೈವೀಕೃಪೆಯಲ್ಲಿ ಮನುಷ್ಯ ಹೊಂದಬಹುದಾದ ಅಲುಗಾಡದ ನಂಬಿಕೆ, ಸಿದ್ಧಿಸಿಕೊಂಡ ಕಾರ್ಯದ ಬಗ್ಗೆ ಕನಿಷ್ಠಮಟ್ಟದ ಆತಂಕವೂ ಇಲ್ಲದಿರುವಿಕೆ ಇವೆಲ್ಲವನ್ನು ಮನುಷ್ಯ ಹೊಂದಬಹುದೆಂಬುದನ್ನು ನಾನು ಮೊದಲ ಸಲ ನೋಡಿದೆ. ಅವರು ತಮ್ಮಲ್ಲಿ ಸಂಗ್ರಹಿಸಿದ ಪ್ರಜ್ಞೆ ಅಪೂರ್ವವಾಗಿತ್ತು, ವೈವಿಧ್ಯಮಯ ಹಾಗೂ ಅಜ್ಞಾತ ಸಿದ್ಧಿಗಳ ಮೂಲಕ ಅವರು ತಲುಪಿದ ಹಂತ ಅಸಾಧಾರಣವಾಗಿತ್ತು.

ಏಕೈಕ ನಿರ್ಧಾರ: ಅತಿಮಾನಸ ಜಗತ್ತಿನ ಅವರೋಹಣವನ್ನು ತ್ವರಿತಗೊಳಿಸು–ವುದಕ್ಕಾಗಿ ಸೂಕ್ಷ್ಮ ಭೌತಿಕದಲ್ಲಿದ್ದು ಕಾರ್ಯಮಾಡಲು ಅವರು ದೇಹ ತ್ಯಾಗ ಮಾಡಿದರೆ ಸಾಧ್ಯವಾಗುವುದೆಂಬುದನ್ನು ಕುರಿತು ತೆಗೆದುಕೊಂಡ ನಿರ್ಧಾರ. ಅವರು ಒಮ್ಮೆಗೆ ದೇಹವನ್ನು ಹಿಂದೆ ಬಿಟ್ಟುಕೊಟ್ಟು ಇನ್ನೂ ವಿರೋಧ ಒಡ್ಡುತ್ತಿರುವ ಸೂಕ್ಷ್ಮ ಭೌತಿಕದ ಮೇಲೆ ಜಯ ಸಾಧಿಸುವುದನ್ನು ಪ್ರಾರಂಭಿಸಿದರು. ಜೀವನ ನೈಜವಲ್ಲವೆಂಬ ಗ್ರಹಿಕೆಯಿಂದ ಅವರು ದೇಹತ್ಯಾಗ ಮಾಡಲಿಲ್ಲ, ಆದರೆ ಈ ಜಯವನ್ನು ದೊರಕಿಸುವುದಕ್ಕಾಗಿ ಅವರು ಮುಕ್ತರಾಗಿರಬೇಕೆಂಬುದರಲ್ಲಿದ್ದ ಅವರ ನಂಬಿಕೆಯ ಮನವರಿಕೆಯಿಂದ ಮಾಡಿದರು, ಅದರಿಂದಾಗಿ ಪೃಥ್ವಿಯ ಮೇಲೆ ದೈವೀಸತ್ಯವನ್ನು ತರಲು ಭೂಮಿಕೆಯನ್ನು ತಯಾರು ಮಾಡಲು ಶಕ್ಯವಾಗುತ್ತಿತ್ತು, ಹಾಗಾಗಿ ಪರಿವರ್ತನೆಯ ಈ ಕಾರ್ಯವನ್ನು, ಎಲ್ಲ ಪರಿಣಾಮಗಳಿದ್ದಾಗ್ಯೂ ಕೈಕೊಳ್ಳಲಾಗುತ್ತಿತ್ತು. ಮೇಲ್ಗಡೆಯಿಂದ ಒಂದು ಶಬ್ದ ಬಂದ ತತ್ಕ್ಷಣ,

ಶಾಸನವೊಂದನ್ನು ಪಾಲಿಸುವ ರೀತಿಯಲ್ಲಿ ನಿರ್ಣಯ ಕೈಕೊಳ್ಳಲಾಗುತ್ತಿತ್ತು. ಇದು ಅವರು ಕೈಕೊಂಡ ಅತ್ಯಂತ ಉದಾರ ಹೃದಯದಿಂದಾದ ಬಲಿದಾನ, ಇಂತಹದು ಹಿಂದೆಂದೂ ಆಗಿರಲಿಲ್ಲ. ಇಲ್ಲ, ಅದು ಪರಮೋಚ್ಚ ದಿವ್ಯಾನಂದದಲ್ಲಿ ತಮ್ಮನ್ನು ತ್ಯಜಿಸಿಬಿಡುವುದಾಗಿತ್ತು. ಅಂತಹದನ್ನು ಅವರು ಮಾತ್ರ ಕೈಕೊಳ್ಳಬಲ್ಲವರಾಗಿದ್ದರು – ಅದು ಭಗವಂತನಲ್ಲಿ ಮಾತ್ರ ಅಸ್ತಿತ್ವದಲ್ಲಿರಲು ತಮ್ಮನ್ನು ಸಂಪೂರ್ಣ ನಿರ್ನಾಮಗೊಳಿಸುವುದಾಗಿತ್ತು.

**(The Supreme)**

*

**ಭರವಸೆ ನೀಡಿದ್ದೆಲ್ಲ ಈಗ ಮೂರ್ತರೂಪ ಪಡೆಯುತ್ತಿದೆ**

ದಿಗಿಲು ಹುಟ್ಟಿಸುವಂತಹದು! ಅವರಲ್ಲಿ ಎಂತಹ ದೈವೀ ಸಾಮರ್ಥ್ಯ ಎಂತಹ ದೈವೀ ಪ್ರಜ್ಞೆ, ಎಂತಹ ದೈವೀ ಜ್ಞಾನ, ಎಂತಹ ದೈವೀ ಕರುಣೆ, ಎಂತಹ ದೈವೀ ಪ್ರಕಾಶ ಇವೆಲ್ಲ ಇದ್ದವು.....

"ಪೃಥ್ವಿಯ ಮೇಲೆ ಪರಿವರ್ತನೆ ಕುರಿತು ನನ್ನ ಕಾರ್ಯ ಮಾಡು, ನನ್ನ ಸಹಾಯ ಅಲ್ಲಿರುತ್ತದೆ" ಎಂದು ಅವರು ನನಗೆ ಆಜ್ಞೆ ಮಾಡಿದರು. ಹಾಗಾಗಿ ನಾನು ಯೋಚನೆ ಮಾಡುತ್ತ ಕುಳಿತುಕೊಳ್ಳಲಿಲ್ಲ, ನಾನು ಯಾವುದಕ್ಕೂ ಸೂತ್ರರೂಪ ಕೊಡಲಿಲ್ಲ, ಆದರೆ ಗಾಢ ನಂಬಿಕೆಯಿಂದ ನನ್ನನ್ನು ಈ ಕಾರ್ಯದಲ್ಲಿ ತೊಡಗಿಸಿಕೊಂಡೆ, ಅವರು ಈ ಕಾರ್ಯವನ್ನು ಎಷ್ಟೊಂದು ಶ್ರಮ ವಹಿಸುತ್ತ ಕೈಗೆತ್ತಿಕೊಂಡಿದ್ದರು ಮತ್ತು ಈಗ ಅದನ್ನು ನಾನು ಕೈಗೆತ್ತಿಕೊಳ್ಳಬೇಕೆಂದು, ಅದು ಮುಗಿಯುವವರೆಗೆ ಮುಂದುವರಿಸಿಕೊಂಡು ಹೋಗಬೇಕೆಂದು ಆಜ್ಞೆ ಮಾಡಿದ್ದರು.

ನಾನು ಪ್ರಶ್ನಿಸುವುದಿಲ್ಲ. ಅವರು ಬಯಸಿದ್ದನ್ನು ಕೈಕೊಳ್ಳಲೇಬೇಕಾಗಿದೆ, ಅವರಿಲ್ಲದೆ ನಾನು ಏನನ್ನೂ ಕೈಕೊಳ್ಳಲು ಸಾಧ್ಯವಿಲ್ಲ. ನಾನೆಂದಾದರೂ ಹಿಂದು ಮುಂದು ನೋಡಿದರೆ ನನಗೆ ಆಧಾರ ನೀಡಲು ಮುಂದೆ ಸಾಗುವಂತೆ ಮಾಡಲು, ಮಾರ್ಗದರ್ಶನ ಹಾಗೂ ಜ್ಞಾನೋದಯ ನೀಡಲು ಪ್ರತಿಯೊಂದು ಹೆಜ್ಜೆಯಲ್ಲಿ ಅವರಿರುತ್ತಾರೆ ಮತ್ತು ನಾವು ಒಟ್ಟಿಗೆ ಅದೆಂತಹ ಅಸಾಧಾರಣ ಕಾರ್ಯವನ್ನು ಸಿದ್ಧಿಸಿಕೊಂಡಿದ್ದೇವೆ!

ಅದೆಲ್ಲದರ ಬಗ್ಗೆ ಕಲ್ಪನೆ ಮಾಡಿಕೊಳ್ಳಲಾಗಿತ್ತು. ಭರವಸೆ ನೀಡಿದ್ದೆಲ್ಲ ಈಗ ಮೂರ್ತರೂಪ ತಾಳುತ್ತಿದೆ.



ದೇಹದ ಪರಿವರ್ತನೆ, ಇನ್ನು ಮುಂದೆ, ವ್ಯರ್ಥ ಮರೀಚಿಕೆಯಂತಲ್ಲ – ಅದು ವಾಸ್ತವ ಸಂಗತಿ, ಬೇರು ಬಿಟ್ಟ ಒಂದು ವಿಧಾನ, ಅದೀಗ ಅಭಿವೃದ್ಧಿ ಹೊಂದುತ್ತಿದೆ, ಪ್ರಕಾಶಮಯ ಭವಿಷ್ಯದತ್ತ ಏಕಪ್ರಕಾರವಾಗಿ ಚಲಿಸುತ್ತಿದೆ. ಈಗಾಗಲೆ ಹೊಸ ದೈವೀ ಪ್ರಕಾಶಕ್ಕೆ ದೇಹ ಅದ್ಭುತ ರೀತಿಯಲ್ಲಿ ಪ್ರತಿಸ್ಪಂದಿಸುತ್ತಿದೆ.

**(ಅನುಯಾಯಿಯೊಡನೆ ಮಾತುಕತೆ)**

*

**ಶ್ರೀ ಅರವಿಂದರು ದ್ವಾರಗಳನ್ನು ತೆರೆದಿರಿಸುವರು**

ಶ್ರೀ ಅರವಿಂದರು ಪ್ರತಿಯೊಂದನ್ನು ವ್ಯವಸ್ಥಿತಗೊಳಿಸಿದ್ದಾರೆ, ಹಾಗಾಗಿ ನನ್ನ ಕಾರ್ಯ ಸುಲಭವಾಗಿದೆ. ಅಚೇತನದ ಈ ಪ್ರಾಂತವನ್ನು ತೆರೆದಿರಿಸಲು ಅವರ ಹತ್ತಿರ ಬೀಗದ ಕೈ ಇದೆ. ದ್ವಾರವನ್ನು ತೆರೆದಿರಿಸಲು ಅವರು ಬೀಗದ ಕೈ ತಿರುಗಿಸುತ್ತಾರೆ ಮತ್ತು ನನ್ನ ಮಾರ್ಗ ಪ್ರಕಾಶಮಯವಾಗುವಂತೆ ಮಾಡುತ್ತಾರೆ ಮತ್ತು ನಾನು ಸಾವಧಾನವಾಗಿ, ಈ ಜಡ ಮತ್ತು ಮಬ್ಬಾದ ಭೌತದ್ರವ್ಯದ ದೇಹದಲ್ಲಿ ದೈವೀ ಶಕ್ತಿ, ಪ್ರಕಾಶಗಳನ್ನು, ದಿವ್ಯಾನಂದವನ್ನು ಒಳಸೇರಿಸಲು ಪ್ರವೇಶಿಸುತ್ತೇನೆ. ಪರಿವರ್ತನೆಗೊಳಪಡಿಸುವ ಈ ಪ್ರಕಾಶದ ಸ್ಪರ್ಶಕ್ಕೊಳಗಾದಾಗ, ಈ ಭೌತದ್ರವ್ಯವನ್ನು ರೂಪಿಸುವ ಪರಮಾಣುಗಳು ಹೊಸ ದೈವೀ ಪ್ರಜ್ಞೆಯೊಂದಕ್ಕೆ ಎಚ್ಚತ್ತುಕೊಳ್ಳುತ್ತವೆ. ಈ ರೀತಿಯಲ್ಲಿ ಆ ಕಾರ್ಯ ಮುಂದುವರಿಯುತ್ತದೆ, ಹರಡಿಕೊಳ್ಳುತ್ತದೆ ಇಲ್ಲವೆ ಬಹುವಾಗು (multiply) ತ್ತದೆ. ಶ್ರೀ ಅರವಿಂದರು ದೈವೀ ಭೌತದ್ರವ್ಯದ ದಿವ್ಯಾತ್ಮರಾಗಿದ್ದಾರೆ, ಇಡೀ ಮನುಕುಲದ ಅಭೀಪ್ಸೆಯಾಗಿದ್ದಾರೆ. ಅವರು ಭೌತದ್ರವ್ಯದಲ್ಲಿರುವ ದೈವೀಪ್ರಕಾಶ ಇಲ್ಲವೆ ದೈವೀ ಭೌತದ್ರವ್ಯದಲ್ಲಿ ಅವತಾರ ತಾಳಿದ ದಿವ್ಯಾತ್ಮ. ಶ್ರೀ ಅರವಿಂದರು ಪರಮೋಚ್ಚ ಭಗವಂತನಿಂದ ಪ್ರತ್ಯೇಕಗೊಂಡು ಈ ಭೌತದ್ರವ್ಯದಲ್ಲಿ, ದೇಹವೊಂದರಲ್ಲಿ ಮುಳುಗು ಹಾಕಿದ್ದಾರೆ, ಅಚೇತನದ ಹಾಗೂ ಅಜ್ಞಾನದ ಈ ಭಾರವನ್ನು ತಮ್ಮ ಮೇಲೆ ಹೊತ್ತುಕೊಂಡಿದ್ದಾರೆ, ಅವುಗಳನ್ನು ದೈವೀ ಜೀವನಕ್ಕಾಗಿ ಎಚ್ಚರಿಸಬೇಕಾಗಿದೆ. ಇದಕ್ಕಾಗಿ ಅವರು ಪರಮೋಚ್ಚನನ್ನು, ದೈವೀ ಕೃಪೆಯನ್ನು ಈ ಪೃಥ್ವಿಯ ಮೇಲೆ ತಮ್ಮ ಕಾರ್ಯಕ್ಕೆ ಸಹಾಯ ಮಾಡಲು ಅವತರಣ ಮಾಡಿರೆಂದು ಆಹ್ವಾನಿಸಿದ್ದಾರೆ. ಆ ಕಾರಣದಿಂದಾಗಿಯೇ, ಅವರ ಕರೆಯನ್ನು ಕೇಳಿ, ನಾನು ಭೌತಿಕ ದ್ರವ್ಯದಲ್ಲಿರುವ ಭೌತಿಕ ದೇಹದಲ್ಲಿ, ನೋವು, ವೇದನೆ ಹಾಗೂ ಮೃತ್ಯುಗಳಿರುವ ಈ ಜಗತ್ತಿನಲ್ಲಿ ಕೆಳಗಿಳಿದು ಬಂದಿದ್ದೇನೆ. ನಮ್ಮಿಬ್ಬರ ಏಕತೆಯಲ್ಲಿ ಈ ಜಗತ್ತು ಕ್ರಮೇಣ ದೈವೀ ಜೀವನದ ಪವಾಡವನ್ನು

ಕಂಡುಕೊಳ್ಳುವುದು. ಅವರಿಗಾಗಿಯೇ ನಾನು ಅವತರಣ ಮಾಡಿ ಬಂದಿದ್ದೇನೆ. ಕೆಳಗಿನಿಂದ ಬಂದ ಭೌತದ್ರವ್ಯದಲ್ಲಿಯ ಈ ಗಾಢ ಅಭೀಪ್ಸೆಯನ್ನು ಅವರು ಮೇಲ್ಗಡೆ ಕಳಿಸಿದರು, ಅದಕ್ಕೆ ದೈವೀಕೃಪೆ ಅವತರಣದ ಮೂಲಕ ಪ್ರತಿಸ್ಪಂದಿಸಿತು. ಪೃಥ್ವಿಗೆ ಅದೆಂತಹ ಅದೃಷ್ಟದ ಗಳಿಗೆ ಇದು. ಮಹತ್ತರ ಪ್ರಗತಿಗಾಗಿ ಇದೊಂದು ಅವಕಾಶ, ಅದರಿಂದಾಗಿ ಇಡೀ ವಿಶ್ವ, ಅದರ ಅಸ್ತಿತ್ವದ ಗುರಿಯತ್ತ, ಶ್ರೇಷ್ಠ ಲವಲವಿಕೆಯೊಂದಿಗೆ ಅರಳಿಕೊಳ್ಳಬಹುದು. ಅದರ ವಿನಿಯೋಗಕ್ಕಾಗಿ ನಮ್ಮ ಸಹಾಯ ಮತ್ತು ಬೆಂಬತ್ತುವುದಕ್ಕೆ ನಮ್ಮ ಸಂಕಲ್ಪ ಇವಿರುವಾಗ ಅಸಾಧ್ಯವಾದುದು ಯಾವುದಿರುತ್ತದೆ! ಇದು ಆ ಕ್ಷಣ...

ಶ್ರೀ ಅರವಿಂದರು ಇರುವರೆಂಬ ಕಾರಣದಿಂದಾಗಿ ಮಾತ್ರ ನಾನು ಕಾರ್ಯವನ್ನು ಸಿದ್ಧಿಸಿಕೊಳ್ಳಬಲ್ಲೆ. ಅವರು ಕಾರ್ಯದ ಬಹು ಭಾಗವನ್ನು ಕೈಕೊಳ್ಳುತ್ತಾರೆ. ಅವರು ನನ್ನನ್ನು ಆಮಂತ್ರಿಸುತ್ತಾರೆ, ದ್ವಾರವನ್ನು ತೆರೆದಿರಿಸುತ್ತಾರೆ, ಈ ಅಚೇತನದ ಆಳಗಳಲ್ಲಿ ನಾನು ಪ್ರವೇಶಿಸುತ್ತೇನೆ, ಅಚೇತನದಲ್ಲಿ ನಿಶ್ಚೇಷ್ಟತೆಯಲ್ಲಿರುವ ಪರಮಾಣುಗಳನ್ನು ಬೆಳಗಲು ನಾನು ಜ್ಯೋತಿಯನ್ನು ಹೊತ್ತಿಸುತ್ತೇನೆ. ಅವು ಎಚ್ಚತ್ತುಕೊಳ್ಳುವಂತೆ ಮಾಡಲು ಅಲ್ಲಿ ಸ್ವಲ್ಪ ಶಕ್ತಿಯನ್ನಿರಿಸುತ್ತೇನೆ, ಅವು ಹೆಚ್ಚಿನ ರೀತಿಯಲ್ಲಿ ಅಭೀಪ್ಸೆಪಡಲೆಂದು ಅವುಗಳಿಗೆ ದೈವೀಪ್ರೇಮವನ್ನು ಕೊಡುತ್ತೇನೆ. ಪ್ರತಿಯೊಂದು ಪರಮಾಣುವನ್ನು ಈ ರೀತಿಯಲ್ಲಿ ಶಕ್ತಿಯಿಂದ ಕೂಡಿದ್ದನ್ನಾಗಿ ಮಾಡುತ್ತೇನೆ.

**(The Supreme, p.52)** **– ಶ್ರೀಮಾತೆ**

*

**ಪ್ರಶ್ನೆ :** *ಶ್ರೀಮಾತೆಯವರೆ, ದೈವೀ ಪ್ರಭು ಮತ್ತು ಶ್ರೀ ಅರವಿಂದರು ಇವರ ನಡುವಿರುವ ಭೇದವೇನು?*

**ಶ್ರೀಮಾತೆ :** ಸಾರಭೂತ ವ್ಯತ್ಯಾಸವಿಲ್ಲ, ಆದರೆ ದೈವೀ ಪ್ರಭು ಎಲ್ಲವೂ ಆಗಿದ್ದಾನೆ, ಶ್ರೀ ಅರವಿಂದರು ಅವನ ಒಂದು ಭಾಗ, ಆದರೆ ಪರಮೋಚ್ಚನಿಂದ ಹೊರಹೊಮ್ಮಿ ಬಂದ ಅವರು ಅವನ ಬಗ್ಗೆ ಪ್ರಜ್ಞೆಯುಳ್ಳವರಾಗಿದ್ದಾರೆ.

**ಪ್ರಶ್ನೆ :** *ಸದ್ಯದ ಕ್ಷಣದಲ್ಲಿ ಶ್ರೀ ಅರವಿಂದರು ಎಲ್ಲಿದ್ದಾರೆ?*

**ಶ್ರೀಮಾತೆ :** ಅವರು ಮುಕ್ತರಾಗಿರುವುದರಿಂದ ತಮಗೆಲ್ಲಿರಬೇಕೆನಿಸುತ್ತದೋ ಅಲ್ಲಿ ಅವರಿರುತ್ತಾರೆ, ಆದರೆ ಅವರಿಗೆ ಸೂಕ್ಷ್ಮ ಭೌತಿಕದಲ್ಲಿ (ಪೃಥ್ವಿಯ ಭೌತಿಕಕ್ಕೆ ಅತಿ



ಹತ್ತಿರದಲ್ಲಿರುವ ಪ್ರಾಂತ) ಶಾಶ್ವತ ಮನೆ ಇದೆ, ಅವರನ್ನು ನೋಡಲು ಬಯಸುವವರು ಅಲ್ಲಿಗೆ ಹೋಗಿ ನೋಡಬಹುದು.

**ಪ್ರಶ್ನೆ :** *ಅವರ ರೂಪ ಯಾವ ರೀತಿಯದಾಗಿದೆ?*

**ಶ್ರೀಮಾತೆ :** ಸೂಕ್ಷ್ಮ ಭೌತಿಕದಲ್ಲಿ ಅವರ ರೂಪ ಪೃಥ್ವಿಯ ಮೇಲಿದ್ದ ಹಾಗಿದೆ, ಆದರೆ ಅದು ಅಮರತ್ವದ ಭವ್ಯ ಶಾಂತಿಯಿಂದ ಕೂಡಿದೆ.

**(White Roses p.4-5)**

*

## ಅವತಾರ ಪುರುಷರಾದ ಶ್ರೀ ಅರವಿಂದರು

**ಸನಾತನ ಜನ್ಮ**

**ಪ್ರಶ್ನೆ :** *ವಿಶ್ವದ ಇತಿಹಾಸದಲ್ಲಿ ಶ್ರೀ ಅರವಿಂದರ ಜನ್ಮ ಸನಾತನ ಎಂದು ನೀವು ಹೇಳಿದಿರಿ. 'ಸನಾತನ' ಎಂದು ಹೇಳಿದಾಗ ಅದರ ನಿಖರವಾದ ಅರ್ಥವೇನಾಗಿತ್ತು?*

**ಶ್ರೀಮಾತೆ :** ಆರೋಹಣದ ಹಂತದಲ್ಲಿರುವ ಪ್ರಜ್ಞೆಯ ನಾಲ್ಕು ಭಿನ್ನ ರೀತಿಗಳಲ್ಲಿ ಆ ವಾಕ್ಯವನ್ನು ತಿಳಿದುಕೊಳ್ಳಬಹುದು.

1. ಭೌತಿಕವಾಗಿ ಆ ಜನ್ಮದ ಪರಿಣಾಮ ಜಗತ್ತಿಗೆ ಶಾಶ್ವತವಾಗಿ ಮಹತ್ವದ್ದಾಗಿರುತ್ತದೆ.
2. ಮಾನಸಿಕವಾಗಿ ವಿಶ್ವದ ಇತಿಹಾಸದಲ್ಲಿ ಶಾಶ್ವತವಾಗಿ ನೆನಪಿನಲ್ಲಿ ಉಳಿಯುವ ಜನ್ಮ ಅದಾಗಿರುತ್ತದೆ.
3. ಚೈತ್ಯಾತ್ಮಿಕವಾಗಿ ಅದು ಯುಗ ಯುಗಾಂತರಗಳಲ್ಲಿ ಮರಳಿ ಸಂಭವಿಸುವ ಜನ್ಮ.
4. ಆಧ್ಯಾತ್ಮಿಕವಾಗಿ ಅದು ಪೃಥ್ವಿಯ ಮೇಲೆ ಸನಾತನನ ಜನ್ಮ.

*

ಪೃಥ್ವಿಯ ಇತಿಹಾಸ ಪ್ರಾರಂಭವಾದಾಗಿನಿಂದ ಶ್ರೀ ಅರವಿಂದರು ಪೃಥ್ವಿಯ ಮೇಲಿನ ಶ್ರೇಷ್ಠ ಪರಿವರ್ತನೆಗಳ ಮೇಲೆ ಒಂದಿಲ್ಲೊಂದು ರೂಪದಲ್ಲಿ ಒಂದಿಲ್ಲೊಂದು ಹೆಸರಿನಡಿಯಲ್ಲಿ, ಯಾವಾಗಲೂ, ಅಧ್ಯಕ್ಷತೆ ವಹಿಸಿದ್ದಾರೆ.

**(CWM, 13/10** **– ಶ್ರೀಮಾತೆ**

*

ಶ್ರೀ ಅರವಿಂದರ ಜನ್ಮದಿನ ಕುರಿತು ನಾನು ಮಾತನಾಡಲು ಉಪಯೋಗಿಸಿದ ಪದಗುಚ್ಛ(phrase) ಕುರಿತು ಆ ಪ್ರಶ್ನೆಯಿದೆ – ಅದು ಅವರ ಜನ್ಮ ದಿನದಂದು ಸಾಯಂಕಾಲ ಹೇಳಿದ ಮಾತಾಗಿತ್ತು – ನಾನು ಅದನ್ನು 'ಸನಾತನ' ಎಂದು ಹೇಳಿದೆ. 'ಸನಾತನ' ಎಂದು ನಾನು ಯಾವ ಅರ್ಥದಲ್ಲಿ ಹೇಳಿದೆ ಎಂದು ಕೇಳಲಾಗಿದೆ.

ಸಹಜವಾಗಿ ಶಬ್ದಗಳ ಅರ್ಥವನ್ನು ಅಕ್ಷರಶಃ ತೆಗೆದುಕೊಂಡರೆ "ಸನಾತನ ಜನ್ಮ" ಎಂಬುದಕ್ಕೆ ಪ್ರಾಮುಖ್ಯತೆ ಬಹಳಷ್ಟಿರುವುದಿಲ್ಲ. ಆ ಶಬ್ದಕ್ಕೆ ಬೇರೆ ಬೇರೆ ಅರ್ಥಗಳು ಹೇಗಿರಬಹುದೆಂಬುದನ್ನು ವಿವರಿಸಿ ಹೇಳುತ್ತೇನೆ: ಅದಕ್ಕೆ ಭೌತಿಕ ವಿವರಣೆ ಇಲ್ಲವೆ ಅರ್ಥ, ಮಾನಸಿಕ ಅರ್ಥ, ಚೈತ್ಯಾತ್ಮಿಕ ಅರ್ಥ ಮತ್ತು ಆಧ್ಯಾತ್ಮಿಕ ಅರ್ಥ ಹೀಗೆ ಬೇರೆ ಬೇರೆ ಅರ್ಥಗಳಿವೆ.

ಭೌತಿಕವಾಗಿ ಈ ಜನ್ಮದ ಪರಿಣಾಮ ಪೃಥ್ವಿ ಇರುವಷ್ಟು ಕಾಲ ಇರುತ್ತದೆ. ಪೃಥ್ವಿಯ ಇಡೀ ಅಸ್ತಿತ್ವದ ಆದ್ಯಂತ ಶ್ರೀ ಅರವಿಂದರ ಜನ್ಮದ ಪರಿಣಾಮಗಳನ್ನು ಕುರಿತು ಭಾವನೆ ತಂದುಕೊಳ್ಳಲಾಗುತ್ತದೆ. ಹಾಗಾಗಿ ನಾನು ಅದನ್ನು ಕಾವ್ಯಾತ್ಮಕ ರೀತಿಯಲ್ಲಿ 'ಸನಾತನ' ಎಂದು ಕರೆದೆ.

ಮಾನಸಿಕವಾಗಿ ಈ ಜನ್ಮದ ನೆನಪು ಶಾಶ್ವತವಾಗಿ ಉಳಿದುಕೊಳ್ಳುವುದು. ಯುಗ ಯುಗಾಂತರಗಳಲ್ಲಿ ಶ್ರೀ ಅರವಿಂದರ ಜನ್ಮವನ್ನು ಅದರ ಎಲ್ಲ ಪರಿಣಾಮಗಳೊಂದಿಗೆ ನೆನಪಿಗೆ ತಂದುಕೊಳ್ಳಲಾಗುವುದು.

ಚೈತ್ಯಾತ್ಮಿಕವಾಗಿ, ವಿಶ್ವದ ಇತಿಹಾಸದಲ್ಲಿ, ಪ್ರತಿಯೊಂದು ಯುಗದಲ್ಲಿ ಶಾಶ್ವತವಾಗಿ ಮರಳಿ ಸಂಭವಿಸುವ ಜನ್ಮ ಇದಾಗಿದೆ. ಈ ಜನ್ಮ ಪೃಥ್ವಿಯ ಇತಿಹಾಸದಲ್ಲಿ ಯುಗ ಯುಗಾಂತರಗಳಲ್ಲಿ ಕಾಲಾನುಕ್ರಮದಿಂದ ಸಂಭವಿಸುವ ಪ್ರಕಟಣೆಯಾಗಿದೆ. ಎಂದರೆ ಜನ್ಮವೇ ಸ್ವತಃ ನವೀಕರಣಗೊಳ್ಳುತ್ತದೆ, ಪುನರಾವರ್ತಿ–ಸುತ್ತದೆ, ಪುನರುತ್ಪಾದನೆಗೊಳಗಾಗುತ್ತದೆ – ಪ್ರತಿಯೊಂದು ಸಲ ಹೆಚ್ಚು ಸಂಪೂರ್ಣ ಹಾಗೂ ಪರಿಪೂರ್ಣವಾದ ಏನೋ ಒಂದನ್ನು ತರುತ್ತದೆ – ಆದರೆ ಅದು ಅವರೋಹಣದ, ಪ್ರಕಟಣೆಯ ಹಾಗೂ ಪಾರ್ಥಿವ ಶರೀರದಲ್ಲಿ ಜನ್ಮ ತಾಳುವ ಅದೇ ಚಲನೆಯಾಗಿರುತ್ತದೆ.

ಮತ್ತು ಕೊನೆಯದಾಗಿ, ಕೇವಲ ಆಧ್ಯಾತ್ಮಿಕ ದೃಷ್ಟಿಕೋನದಿಂದ ಅದನ್ನು ಪೃಥ್ವಿಯ ಮೇಲಿನ ಸನಾತನನ ಜನ್ಮ ಎಂದು ಹೇಳಬಹುದು. ಏಕೆಂದರೆ ಅವತಾರ



ಭೌತಿಕ ರೂಪ ತಾಳಿದ ಪ್ರತಿಸಲ ಅದು ಪೃಥ್ವಿಯ ಮೇಲೆ ಸನಾತನನ ಜನ್ಮವಾಗಿರುತ್ತದೆ.

**(CWM, 9/178–79)** **– ಶ್ರೀಮಾತೆ**

*

ಶ್ರೀ ಅರವಿಂದರು ಪರಮೋಚ್ಚನಿಂದ ಹೊರಹೊಮ್ಮಿ ಬಂದವರು (emanation) ಪೃಥ್ವಿಯ ಮೇಲೆ ಹೊಸ ಕುಲ ಮತ್ತು ಅತಿಮಾನಸದ ಹೊಸ ಜಗತ್ತು ಇವುಗಳನ್ನು ಕುರಿತು ಘೋಷಣೆ ಮಾಡಲು ಬಂದಿದ್ದರು.

ಅದಕ್ಕಾಗಿ ನಾವು ಎಲ್ಲ ನಿಷ್ಕಾಪಟ್ಯದಿಂದ, ಅತ್ಯುತ್ಸಾಹದಿಂದ ತಯಾರಾಗೋಣ.

**(CWM, 13/19)** **– ಶ್ರೀಮಾತೆ**

*

ನಿಮ್ಮ ಹೃದಯ ಹಾಗೂ ಯೋಚನೆಗಳಲ್ಲಿ ಶ್ರೀ ಅರವಿಂದರು ಹಾಗೂ ನನ್ನ ನಡುವೆ ಯಾವ ಭಿನ್ನತೆಯನ್ನು ಮಾಡದ ಹಾಗೆ ಆದಾಗ, ಶ್ರೀ ಅರವಿಂದರನ್ನು ಕುರಿತು ಯೋಚಿಸುವುದು ನನ್ನನ್ನು ಕುರಿತು ಯೋಚಿಸಿದಂತೆ ಮತ್ತು ನನ್ನನ್ನು ಕುರಿತು ಯೋಚಿಸುವುದು ಅನಿವಾರ್ಯವಾಗಿ ಶ್ರೀ ಅರವಿಂದರನ್ನು ಕುರಿತು ಯೋಚಿಸಿದಂತೆ ಆದಾಗ, ಒಬ್ಬರನ್ನು ನೋಡಿದಾಗ ಅದರರ್ಥ ಇನ್ನೊಬ್ಬರನ್ನು, ಇಬ್ಬರೂ ಒಬ್ಬರೇ ವ್ಯಕ್ತಿ ಎನ್ನುವ ರೀತಿಯಲ್ಲಿ ಅನಿವಾರ್ಯವಾಗಿ ನೋಡು–ವಂತಾದಾಗ ನೀವು ಅತಿಮಾನಸ ಶಕ್ತಿ ಹಾಗೂ ಪ್ರಜ್ಞೆಗಳಿಗೆ ತೆರೆದುಕೊಳ್ಳಲು ಪ್ರಾರಂಭಿಸಿರುವಿರಿ ಎಂಬುದನ್ನು ತಿಳಿದುಕೊಳ್ಳುವಿರಿ.

**(CWM, 13/32)** **– ಶ್ರೀಮಾತೆ**

*

ಸಂಭೂತಿ (becoming) ಯ ಶಾಶ್ವತತೆಯಲ್ಲಿ ಪ್ರತಿಯೊಬ್ಬ ಅವತಾರ ಪುರುಷ ಹೆಚ್ಚು ಸಂಪೂರ್ಣ ಸಿದ್ಧಿಯನ್ನು ಕುರಿತು ಕೇವಲ ಘೋಷಣೆ ಮಾಡುವವ–ನಾಗಿರುತ್ತಾನೆ, ಅಗ್ರಗಾಮಿ (fore runner) ಯಾಗಿರುತ್ತಾನೆ.

ಆದಾಗ್ಯೂ ಭವಿಷ್ಯತ್ಕಾಲಕ್ಕೆ ಸಂಬಂಧಿಸಿದ ಅವತಾರಗಳ ವಿರುದ್ಧ ಗತಕಾಲದ ಅವತಾರಗಳನ್ನು ಹೆಚ್ಚು ದೈವೀಕರಿಸುವ ಪ್ರವೃತ್ತಿ ಜನರಲ್ಲಿರುತ್ತದೆ.

ಈಗ ನಾಳಿನ ಸಿದ್ಧಿಯನ್ನು ಕುರಿತು ಜಗತ್ತಿಗೆ ಘೋಷಣೆ ಮಾಡುತ್ತ ಶ್ರೀ ಅರವಿಂದರು ಬಂದಿದ್ದಾರೆ ಮತ್ತು ಅವರ ಸಂದೇಶ ಹಿಂದಿನವರು ಎದುರಿಸಿದ ಅದೇ ಬಗೆಯ ವಿರೋಧವನ್ನು ಎದುರಿಸುತ್ತಿದೆ.

ಆದರೆ ಮುಂಬರುವ ದಿನಗಳು ಅವರು ತೆರೆದು ತೋರಿಸಿದ್ದನ್ನು ಪ್ರಮಾಣೀಕರಿಸುತ್ತವೆ ಮತ್ತು ಅವರ ಕಾರ್ಯ ಪೂರ್ತಿಗೊಳ್ಳುತ್ತದೆ.

**(CWM, 13/22)** **– ಶ್ರೀಮಾತೆ**

*

**ಪ್ರಶ್ನೆ :** *ಭಗವಂತ ಎಂದರೆ ಯಾರು?*

**ಶ್ರೀಮಾತೆ :** ನೀವು ಶ್ರೀ ಅರವಿಂದರಲ್ಲಿ ಆರಾಧಿಸುವುದು ಭಗವಂತ.

**(CWM, 13/27)** **– ಶ್ರೀಮಾತೆ**

*

**ಅವತಾರ ತಾಳಿದವರ ಎರಡು ಬಗೆಯ ಕಾರ್ಯ**

ಸಮಾನಾಂತರದಲ್ಲಿರುವ ಎರಡು ವಿಷಯಗಳಿವೆ, ಸನಾತನ ಹಾಗೂ ಪರಮೋಚ್ಚ ದೃಷ್ಟಿಕೋನದಿಂದ ಅವು ಅಷ್ಟೇ ಮಹತ್ವವಾಗಿವೆ, ಸಿದ್ಧಿ ನಿಜವಾದ ಸಿದ್ಧಿಯಾಗುವುದಕ್ಕೆ ಅವೆರಡೂ ಸಮಾನ ರೀತಿಯಲ್ಲಿ ಅವಶ್ಯವಾಗಿವೆ.

ಒಂದೆಡೆಯಲ್ಲಿ ಶ್ರೀ ಅರವಿಂದರಿದ್ದಾರೆ – ಅವತಾರ ಪುರುಷರಾದ ಅವರು ಪೃಥ್ವಿಯ ಮೇಲೆ ಪರಮೋಚ್ಚ ಪ್ರಜ್ಞೆ ಹಾಗೂ ಸಂಕಲ್ಪಗಳನ್ನು ಪ್ರತಿನಿಧಿಸಿದ್ದರು. ಅವರು ನನ್ನನ್ನು ಪರಮೋಚ್ಚ ಮಾತೆ ಎಂದು ಸಾರಿ ಹೇಳಿದರು, ಮತ್ತು ಇನ್ನೊಂದೆಡೆಗೆ ಸಮಗ್ರ ರೂಪದ ಸಾಧನೆಯ ಮೂಲಕ ಸಿದ್ಧಿ ಪಡೆಯುವುದಿತ್ತು. ನಾನು ಪರಮೋಚ್ಚ ಮಾತೆಯಾಗಿರಬಹುದು, ನನಗೆ ಸಾಧನೆಯ ಆವಶ್ಯಕತೆ ಇರಲಿಕ್ಕಿಲ್ಲ. ಶ್ರೀ ಅರವಿಂದರು ತಮ್ಮ ದೇಹದಲ್ಲಿದ್ದಾಗ, ವಾಸ್ತವದಲ್ಲಿ, ನನ್ನ ಸಾಧನೆಯನ್ನು ಕೈಕೊಳ್ಳುತ್ತಿದ್ದರು ಮತ್ತು ಅದರ ಪರಿಣಾಮವನ್ನು ನಾನು ಸ್ವೀಕರಿಸುತ್ತಿದ್ದೆ. ಈ ಪರಿಣಾಮಗಳು ಸ್ವಯಂಪ್ರೇರಿತವಾಗಿ ನನ್ನ ಬಾಹ್ಯ ಸತ್ತೆಯಲ್ಲಿ ಸ್ಥಾಪಿತಗೊಳ್ಳುತ್ತಿದ್ದವು, ಆದರೆ ಸಾಧನೆ ಕೈಕೊಳ್ಳುವವರು ಅವರಾಗಿದ್ದರು, ನಾನಾಗಿರಲಿಲ್ಲ. ನಾನು ಕೇವಲ ಅವರ ಸಾಧನೆ ಹಾಗೂ ಜಗತ್ತು ಇವುಗಳ ನಡುವೆ ಸೇತುವೆಯಾಗಿದ್ದೆ. ಅವರು ದೇಹತ್ಯಾಗ ಮಾಡಿದ ನಂತರ ನಾನೇ ಸಾಧನೆಯನ್ನು



ಕೈಗೆತ್ತಿಕೊಳ್ಳಬೇಕಾಯಿತು. ಸೇತುವೆಯ ರೂಪದಲ್ಲಿದ್ದ ಕಾರ್ಯವನ್ನು ಮಾಡಬೇಕಾಗಿತ್ತಷ್ಟೇ ಅಲ್ಲ, ಆದರೆ ಸಾಧನೆಯನ್ನೂ ಮುಂದುವರಿಸಿಕೊಂಡು ಹೋಗಬೇಕಾಗಿತ್ತು. ಅವರು ಹೋದ ನಂತರ ದೇಹದಲ್ಲಿದ್ದಾಗ ಅವರು ನಿರ್ವಹಿಸುತ್ತಿದ್ದ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಿದರು ಮತ್ತು ನಾನು ಅದನ್ನು ಹೊರಲೇಬೇಕಾಗಿತ್ತು. ಹಾಗಾಗಿ ಇವೆರಡೂ ವಿಷಯಗಳಿವೆ. ಕೆಲವೊಮ್ಮೆ ಒಂದು ವಿಷಯ, ಬೇರೆ ವೇಳೆಯಲ್ಲಿ ಇನ್ನೊಂದು ವಿಷಯ ಪ್ರಧಾನವಾಗಿರುತ್ತದೆ ಮತ್ತು ಅವೆರಡೂ ಇಡಿಯಾದ ಪರಿಪೂರ್ಣ ಸಿದ್ಧಿಯಲ್ಲಿ ಜೊತೆಗೂಡಲು ಪ್ರಯತ್ನಿಸುತ್ತವೆ. ಪರಮೋಚ್ಚನ ನಿರ್ವಾಹಕಿಯ ಸನಾತನ, ಅನಿರ್ವಚನೀಯ ಹಾಗೂ ಬದಲಾವಣೆ ಹೊಂದದ ಪ್ರಜ್ಞೆ ಒಂದು ವಿಷಯ, ಎಂದೆಂದಿಗೂ ಹೆಚ್ಚುತ್ತಿರುವ ಪ್ರಗತಿಯತ್ತ ಆರೋಹಣ ಮಾಡಲು ಹೆಣಗುತ್ತಿರುವ ಸಮಗ್ರ ಯೋಗದ ಸಾಧಕನ ಪ್ರಜ್ಞೆ ಇನ್ನೊಂದು ವಿಷಯ.

ನನ್ನನ್ನು ಸನಾತನ, ವಿಶ್ವಂಭರ ದೈವೀಮಾತೆ ಎಂದು ಮತ್ತು ಶ್ರೀ ಅರವಿಂದರನ್ನು ಅವತಾರ ಪುರುಷರೆಂದು ಗ್ರಹಿಸುವ ಜನರು ನಮ್ಮ ಸಾಮರ್ಥ್ಯ ಸರ್ವತಂತ್ರ ಸ್ವತಂತ್ರವಾದದ್ದು ಅಲ್ಲವೆಂಬುದನ್ನು ತಿಳಿದು ಆಶ್ಚರ್ಯಚಕಿತರಾಗುತ್ತಾರೆ. ಇದು ಹೀಗಿರಲು 'ಅದು ಹಾಗಿರಲಿ' ಎಂದು ನಾವು ಕೇವಲ ಹೇಳಿದರೆ ಸಾಕಾಗದು ಎಂಬುದು ಅವರಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ.

ಇದು ಏಕೆಂದರೆ ಸಮಗ್ರ ಸಿದ್ಧಿಯಲ್ಲಿ ಸನಾತನನ ವತಿಯಿಂದ ಹೊರಬರುವ ಸಾಮರ್ಥ್ಯ ಮತ್ತು ಉತ್ಕ್ರಾಂತಿಪರ ಬೆಳವಣಿಗೆಯ ಮೂಲಕ ಸಾಧನೆಯಿಂದ ಹೊರಬರುವ ಸಾಮರ್ಥ್ಯ ಇವುಗಳ ಏಕತೆ ಅವಶ್ಯವಾಗಿರುತ್ತದೆ.

**(ಅನುಯಾಯಿಯೊಬ್ಬನೊಡನೆ ಮಾತುಕತೆ, ಅಕ್ಟೋಬರ 10/1958)** **– ಶ್ರೀಮಾತೆ**

*

**ಮನುಕುಲದ ಭಾರವನ್ನು ಹೊತ್ತಿರುವ ದೈವೀ ಕರುಣೆ**

**ಪ್ರಶ್ನೆ :** *ಆಶ್ರಮದಲ್ಲಿರುವ ಬಹಳಷ್ಟು ಜನರು ಗೌರವಾರ್ಹರಾಗಿಲ್ಲ ಎಂದು ಕ್ಷ ನನಗೆ ಹಲವಾರು ಸಲ ಹೇಳಿದ್ದಾನೆ.*

**ಶ್ರೀಮಾತೆ :** ಪೃಥ್ವಿ ಇಡಿಯಾಗಿ ಅದರ ಎಲ್ಲ ರೂಪಗಳಲ್ಲಿ, ಪರಿವರ್ತನೆಗೆ ಕನಿಷ್ಠ ಮಟ್ಟದಲ್ಲೂ ತಯಾರಾಗಿರದವರನ್ನೂ ಒಳಗೊಂಡು ತಯಾರಾಗಿರಬೇಕು.

ಪೃಥ್ವಿಯ ಮೇಲಿರುವ ಅಂಶಗಳ ಸಾಂಕೇತಿಕ ಪ್ರತಿನಿಧಿತ್ವವಿರಬೇಕು, ಅದರಿಂದಾಗಿ ನಾವು ಕೊಂಡಿಯನ್ನು ಸ್ಥಾಪಿಸಲು ಕಾರ್ಯಮಾಡುವಂತಾಗುವುದು. ಪೃಥ್ವಿ ವಿಶ್ವದ ಸಾಂಕೇತಿಕ ಪ್ರತಿನಿಧಿಯಾಗಿದೆ ಮತ್ತು ಆ ಗುಂಪು ಪೃಥ್ವಿಯನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತದೆ.

ಆ ವಿಷಯ ಕುರಿತು ಶ್ರೀ ಅರವಿಂದರು ಹಾಗೂ ನಾನು 1914ರಲ್ಲಿ ಚರ್ಚೆ ಮಾಡಿದ್ದೆವು, ಏಕೆಂದರೆ ನಮಗೆ ಎರಡು ಸಾಧ್ಯತೆಗಳು ಕಂಡು ಬಂದಿದ್ದವು: ನಾವು ಈಗ ಕೈಕೊಳ್ಳುತ್ತಿದ್ದುದು ಒಂದು ಸಾಧ್ಯತೆ ಇಲ್ಲವೆ ಅತಿ ಮನಸ್ಸನ್ನು ಸಿದ್ಧಿಸಿ–ಕೊಳ್ಳದವರೆಗೆ ಅಷ್ಟೇ ಅಲ್ಲ, ಆದರೆ ಹಾಗೆಯೇ ಭೌತಿಕ ಪರಿವರ್ತನೆಯನ್ನು ಪ್ರಾರಂಭಿಸಿರದವರೆಗೆ ಏಕಾಂತದಲ್ಲಿ, ಪ್ರತ್ಯೇಕತೆಯಲ್ಲಿ ಒಳಸರಿದುಕೊಂಡು ಇದ್ದುಬಿಡುವುದು ಇನ್ನೊಂದು ಸಾಧ್ಯತೆಯಾಗಿತ್ತು. ನಾವು ಪ್ರತ್ಯೇಕವಾಗಿ ಇರುವುದು ಸಾಧ್ಯವಿಲ್ಲ ಎಂದು ಶ್ರೀ ಅರವಿಂದರು ಸರಿಯಾಗಿಯೇ ಹೇಳಿದರು, ಏಕೆಂದರೆ ನೀವು ಪ್ರಗತಿ ಸಾಧಿಸುತ್ತಿದ್ದಂತೆ ಹೆಚ್ಚು ಹೆಚ್ಚಾಗಿ ವಿಶ್ವಂಭರಗೊಳ್ಳುತ್ತೀರಿ ಪರಿಣಾಮವಾಗಿ ನೀವು ಯಾವುದೇ ಸಂದರ್ಭದಲ್ಲಿ ಭಾರವನ್ನು ನಿಮ್ಮ ಮೇಲೆ ಹೊತ್ತುಕೊಳ್ಳುತ್ತೀರಿ.

**(ಅನುಯಾಯಿಯೊಬ್ಬನೊಡನೆ ಮಾತುಕತೆ, ಸಪ್ಟಂಬರ 20/1960) – ಶ್ರೀಮಾತೆ**

*

## ಶ್ರೀ ಅರವಿಂದರು – ಕೊನೆಯ ಅವತಾರ ಪುರುಷರು

**ಪ್ರಶ್ನೆ :** *ಅತಿಮಾನಸ ದೃಢವಾಗಿ ಸ್ಥಾಪಿತಗೊಂಡ ನಂತರ ಅವತಾರ ಪುರುಷರು ಜನ್ಮ ತಾಳುವ ಆವಶ್ಯಕತೆ ಇರುತ್ತದೆಯೆ?*

**ಶ್ರೀಮಾತೆ :** ಪೃಥ್ವಿಯ ಮೇಲೆ ಜೀವಿಸುವ ಸತ್ತೆಗಳಲ್ಲಿ ಅತಿಮನಸ್ಸು ಪ್ರಕಟವಾಗ ತೊಡಗಿದಾಗ ಈ ಪ್ರಶ್ನೆಗೆ ಉತ್ತರ ನೀಡುವುದು ಹೆಚ್ಚು ಸುಲಭವಾಗುವುದು.

'ಶ್ರೀ ಅರವಿಂದರದು ಕೊನೆಯ ಅವತಾರ' ಎಂದು ನಾನು ಯಾವಾಗಲೂ ಕೇಳುತ್ತಿದ್ದೆ. ಆದರೆ ಬಹುಶಃ ಮಾನವ ದೇಹದಲ್ಲಿ ಅವತಾರ ತಾಳಿದವರಲ್ಲಿ ಅವರು ಕೊನೆಯವರಾಗಬಹುದು.

**(CWM, 10/253) – ಶ್ರೀಮಾತೆ**

*



ಶ್ರೀ ಅರವಿಂದರು ಗತಕಾಲಕ್ಕಾಗಲಿ ಇಲ್ಲವೆ ಇತಿಹಾಸ ಕಾಲಕ್ಕಾಗಲಿ ಸೇರಿದವರಲ್ಲ.

ಭವಿಷ್ಯತ್ತು ತನ್ನ ಸಿದ್ಧಿಯತ್ತ ಮುನ್ನಡೆಯುತ್ತಿರುವುದನ್ನು ಶ್ರೀ ಅರವಿಂದರು ಪ್ರತಿನಿಧಿಸುತ್ತಾರೆ.

**(CWM, 12/210–11) – ಶ್ರೀಮಾತೆ**

*

ಶ್ರೀ ಅರವಿಂದರನ್ನು ಯಾರು ಅರ್ಥಮಾಡಿಕೊಳ್ಳಲು ಸಾಧ್ಯ? ಅವರು ವಿಶ್ವದಷ್ಟು ವಿಶಾಲವಾಗಿದ್ದಾರೆ, ಅವರ ಬೋಧನೆ ಅನಂತವಾಗಿದೆ.

ಅವರಿಗೆ ಹತ್ತಿರವಾಗಲು ಇರುವ ಏಕೈಕ ಮಾರ್ಗವೆಂದರೆ ಅವರನ್ನು ನಿಷ್ಕಾಪಟ್ಯದಿಂದ ಪ್ರೀತಿಸುವುದಾಗಿದೆ ಮತ್ತು ಅವರ ಕಾರ್ಯಕ್ಕೆ, ಯಾವ ಕಾದಿರಿಸಿ–ಕೊಳ್ಳುವಿಕೆ ಇಲ್ಲದೆ ಮನುಷ್ಯ ತನ್ನನ್ನು ಕೊಟ್ಟುಕೊಳ್ಳುವುದಾಗಿದೆ. ಹೀಗೆ ಪ್ರತಿಯೊಬ್ಬನೂ ತನಗೆ ಸಾಧ್ಯವಿದ್ದಷ್ಟು ಹೆಚ್ಚು ಒಳ್ಳೆಯ ರೀತಿಯಲ್ಲಿ ಕೈಕೊಳ್ಳುತ್ತಾನೆ ಮತ್ತು ಶ್ರೀ ಅರವಿಂದರು ಭವಿಷ್ಯತ್ತಿನಲ್ಲಿ ನಿರೀಕ್ಷಿಸುವ ಪರಿವರ್ತನಾ ಕಾರ್ಯಕ್ಕೆ ತನಗೆ ಸಾಧ್ಯವಿದ್ದಷ್ಟನ್ನು ಒದಗಿಸುತ್ತಾನೆ.

**(CWM, 12/397 – ಶ್ರೀಮಾತೆ**

*

## ಶ್ರೀ ಅರವಿಂದರು ಹಾಗೂ ಶ್ರೀ ಕೃಷ್ಣ

ಇಲ್ಲಿ ಶ್ರೀ ಅರವಿಂದರು ಇದ್ದಾಗಿನ ದಿನಗಳ ನೆನಪು ನನಗಿದೆ. ಆಗ ನಾನು ಕೆಳಗಿನ ಮಹಡಿಗೆ ಹೋಗಿ ಅಲ್ಲಿರುವ ಹಜಾರದಲ್ಲಿ ಗುಂಪುಗೂಡಿದ್ದ ಜನರೊಂದಿಗೆ ಧ್ಯಾನದ ಕಾರ್ಯಕ್ರಮ ನಡೆಸುತ್ತಿದ್ದೆ. ಅಲ್ಲಿ ಕಂಬಗಳ ಮೇಲೆ ಲೋಹವನ್ನೊಳಗೊಂಡ ಕಲ್ಲಿನ ಪದರು (ledge) ಇದೆ. ಅಲ್ಲಿ ಎಲ್ಲ ದೇವತೆಗಳು ಬಂದು ಕುಳಿತಿರುತ್ತಿದ್ದರು – ಶಿವ, ಕೃಷ್ಣ, ಲಕ್ಷ್ಮಿ, ತ್ರಿಮೂರ್ತಿ ಇವರೆಲ್ಲರೂ, ಚಿಕ್ಕವರು, ದೊಡ್ಡವರು ಹೀಗೆಲ್ಲರೂ ನಿಯತವಾಗಿ (regularly) ಪ್ರತಿಯೊಂದು ದಿನ ಈ ಧ್ಯಾನದ ಕಾರ್ಯಕ್ರಮಕ್ಕೆ ಬರುತ್ತಿದ್ದರು. ಅದು ಬಹಳ ಸೊಗಸಾದ ದೃಶ್ಯ–ವಾಗಿರುತ್ತಿತ್ತು. ಆದರೆ ಪರಮೋಚ್ಚನಿಗಾಗಿ ಈ ಬಗೆಯ ಆರಾಧನಾಭಾವ ಅವರಲ್ಲಿರಲಿಲ್ಲ, ಆ ಕಲ್ಪನೆ ಅವರಿಗೆ ಉಪಯುಕ್ತವಾಗಿರಲಿಲ್ಲ – ಪ್ರತಿಯೊಬ್ಬರೂ

ಅವರದೇ ರೀತಿಯ ಸತ್ತೆಯಲ್ಲಿ, ಪೂರ್ತಿಯಾಗಿ ತಮ್ಮದೇ ಸನಾತನ ದೈವತ್ವದ ಬಗ್ಗೆ ಅರಿವುಳ್ಳವರಾಗಿದ್ದರು ಮತ್ತು ಪ್ರತಿಯೊಬ್ಬರೂ ಉಳಿದ ಎಲ್ಲರನ್ನು ಪ್ರತಿನಿಧಿಸ–ಬಲ್ಲೆವೆಂದು ಸರಿಯಾಗಿ ತಿಳಿದುಕೊಂಡಿದ್ದರು. ತಮ್ಮದು ಒಂದು ಬಗೆಯ ಸಮುದಾಯ ಎಂದು ಅವರು ಭಾವಿಸಿದ್ದರು, ಆದರೆ ಚೈತ್ಯಾತ್ಮಿಕ ಜೀವನ ಕೊಡುವ ಆಳವಾದ ಪ್ರೇಮ, ಸಹಾನುಭೂತಿ, ಒಂದುಗೂಡಿರುವಿಕೆ ಇಂತಹ ಯಾವ ಗುಣಗಳೂ ಅವರಲ್ಲಿರಲಿಲ್ಲ.

1926ರಲ್ಲಿ ನಾನು ಒಂದು ಬಗೆಯ ಅಧಿಮಾನಸ ಸೃಷ್ಟಿಯನ್ನು ಪ್ರಾರಂಭಿಸಿದೆ, ಎಂದರೆ ನಾನು ಅಧಿಮಾನಸವನ್ನು ಕೆಳಗೆ ಪೃಥ್ವಿಯ ಮೇಲೆ ಭೌತಿಕದಲ್ಲಿ ತೆಗೆದುಕೊಂಡು ಬಂದಿದ್ದೆ. ಈ ಎಲ್ಲ ದೇವತೆಗಳಿಗೆ ಅವತಾರ ತಾಳಿರಿ, ದೇಹವೊಂದರ ಜೊತೆಗೆ ತಾದಾತ್ಮ್ಯ ಕಂಡುಕೊಳ್ಳಿರಿ ಎಂದು ಹೇಳಿದೆ. ಸರಿ, ನನ್ನ ಸ್ವತಃ ಕಣ್ಣುಗಳಿಂದ ಶ್ರೀಕೃಷ್ಣನನ್ನು ನೋಡಿದೆ, ಅವನು ಯಾವಾಗಲೂ ಶ್ರೀ ಅರವಿಂದರೊಡನೆ ಸೌಹಾರ್ದ ಸಂಬಂಧ ಹೊಂದಿದ್ದ, ಅವನು ಶ್ರೀ ಅರವಿಂದರ ದೇಹದಲ್ಲಿಳಿದು ಬರಲು ಒಪ್ಪಿಕೊಂಡ. ಅದು ನವ್ಹೆಂಬರ 24, 1926ರಂದು ಸಂಭವಿಸಿತ್ತು.

ನಡೆದಿದ್ದು ಇದು. ಶ್ರೀಕೃಷ್ಣ ಶ್ರೀ ಅರವಿಂದರ ದೇಹದಲ್ಲಿ ಇಳಿದು ಬರಲು ಒಪ್ಪಿಕೊಂಡ ... ಅವತಾರ ತಾಳುವುದು, ದೇಹವೊಂದರಲ್ಲಿ ಸ್ಥಿರವಾಗಿ ಉಳಿದುಕೊಳ್ಳುವುದು ಮತ್ತು ಕೇವಲ ಬಂದು ಹೋಗುವ ರೀತಿಯಲ್ಲಿ ಚಲಿಸುತ್ತ ಪ್ರಭಾವ ಬೀರುವ ರೀತಿಯಲ್ಲಿ ಕಾರ್ಯ ಮಾಡುವುದು ಇವುಗಳ ನಡುವೆ ದೊಡ್ಡ ಭೇದವಿದೆ. ದೇವತೆಗಳು ಯಾವಾಗಲೂ ಚಲಿಸುತ್ತಿರುತ್ತಾರೆ, ನಾವೇ ನಮ್ಮ ಆಂತರಿಕ ಸತ್ತೆಗಳಲ್ಲಿ ಬರುತ್ತೇವೆ, ಹೋಗುತ್ತೇವೆ, ಮತ್ತು ನೂರಾರು ಇಲ್ಲವೆ ಸಾವಿರಾರು ಸ್ಥಾನಗಳಲ್ಲಿ ಒಮ್ಮೆಗೆ ಕಾರ್ಯ ಕೈಕೊಳ್ಳುತ್ತೇವೆ ಎಂಬುದು ಸ್ಪಷ್ಟವಿದೆ. ಯಾವಾಗಾದರೊಮ್ಮೆ ಬರುವುದು ಮತ್ತು ದೇಹವೊಂದಕ್ಕೆ ಶಾಶ್ವತವಾಗಿ ಕಟ್ಟಿಹಾಕಿ–ಕೊಳ್ಳುವುದು ಇವುಗಳಲ್ಲಿ ಭೇದವಿದೆ, ಅದು ಶಾಶ್ವತ ಪ್ರಭಾವ ಮತ್ತು ಶಾಶ್ವತ ಸಾನ್ನಿಧ್ಯ ಇವುಗಳ ನಡುವಿರುವ ಭೇದದ ಹಾಗಿದೆ.

**(ಅನುಯಾಯಿಯೊಬ್ಬನೊಡನೆ ಮಾತುಕತೆ, ಅಗಸ್ಟ 2, 1961) – ಶ್ರೀಮಾತೆ**

*



**ಶ್ರೀ ಅರವಿಂದರು ಮತ್ತು ಶಿವ**

ಇನ್ನೊಂದೆಡೆಗೆ ಶಿವ ಈ ಆಹ್ವಾನವನ್ನು ತಿರಸ್ಕರಿಸಿದ. "ಇಲ್ಲ, ನೀವು ನಿಮ್ಮ ಕಾರ್ಯವನ್ನು ಪೂರ್ತಿಗೊಳಿಸಿದ ನಂತರ ಬರುತ್ತೇನೆ. ಜಗತ್ತು ಅದಿರುವ ರೀತಿಯಲ್ಲಿ ನಾನು ಅದರಲ್ಲಿ ಬರುವುದಿಲ್ಲ, ಆದರೆ ಸಹಾಯ ಮಾಡಲು ನಾನು ಸಿದ್ಧನಿದ್ದೇನೆ." ಆ ದಿನ ಅವನು ನನ್ನ ಕೋಣೆಯಲ್ಲಿ ನಿಂತುಕೊಂಡಿದ್ದನು, ಎಷ್ಟೊಂದು ಎತ್ತರವಾಗಿದ್ದ ಅವನ ಶಿರ ಛತ್ತನ್ನು ಮುಟ್ಟಿತ್ತು! ಅವನು ತನ್ನದೇ ವಿಶಿಷ್ಟ ಪ್ರಕಾಶದಿಂದ ತುಂಬಿಕೊಂಡಿದ್ದ, ಆ ಪ್ರಕಾಶದಲ್ಲಿ ಕೆಂಪು ಹಾಗೂ ಬಂಗಾರ ವರ್ಣಗಳ ಲೀಲೆಯಿತ್ತು. ಅವನಿರುವ ಹಾಗೆ ತನ್ನ ಪರಮೋಚ್ಚ ಪ್ರಜ್ಞೆಯನ್ನು ಪ್ರಕಟಿಸುತ್ತಿದ್ದ – ಅತ್ಯಂತ ಮಹಿಮಾನ್ವಿತ ಸತ್ತೆ ಅವನಾಗಿದ್ದ. ಹಾಗಾಗಿ ನಾನು ಎದ್ದು ನಿಂತೆ. ಆಗ ಅವನು ಹೇಳಿದ: "ಇಲ್ಲ ನಾನು ಒಂದು ದೇಹಕ್ಕೆ ನನ್ನನ್ನು ಕಟ್ಟಿಹಾಕಿಕೊಳ್ಳಲಾರೆ, ಆದರೆ ನೀನು ಬಯಸುತ್ತಿದ್ದುದು ಏನೇ ಆಗಿರಲಿ, ಅದನ್ನು ನಾನು ನಿನಗೆ ಕೊಡುತ್ತೇನೆ." ನನಗೆ ಬೇಕಾಗಿದ್ದ ಒಂದೇ ವಿಷಯ (ಅದನ್ನು ಶಬ್ದಗಳಿಲ್ಲದೆ ಹೇಳಲಾಯಿತು): "ನನ್ನ ಭೌತಿಕ ಅಹಂಕಾರದಿಂದ ಮುಕ್ತಳಾಗಲು ಬಯಸುತ್ತೇನೆ."

ಸರಿ, ನನ್ನ ಮಗು, ಅದು ಸಂಭವಿಸಿತು! ಅದು ಅಸಾಧಾರಣವಾಗಿತ್ತು. ಸ್ವಲ್ಪ ಸಮಯದ ನಂತರ ನಾನು ಶ್ರೀ ಅರವಿಂದರನ್ನು ಹುಡುಕಿಕೊಂಡು ಹೋಗಿ ಅವರಿಗೆ ಹೇಳಿದೆ: "ಇಲ್ಲಿ ಏನು ಸಂಭವಿಸಿದೆ, ನೋಡಿರಿ. ನನ್ನಲ್ಲಿ ವಿನೋದದ ಸಂವೇದನೆಯಿದೆ: (ಶ್ರೀಮಾತೆ ನಗುತ್ತಾರೆ) ಜೀವಕೋಶಗಳು ಇನ್ನು ಮುಂದೆ ಗುಂಪು ಗುಂಪಾಗಿರುವುದಿಲ್ಲ! ಅವು ಹರಡಿ ಹೋಗಲಿವೆ!" ಅವರು ನನ್ನತ್ತ ನೋಡಿ ಮುಗುಳ್ನಕ್ಕರು ಮತ್ತು "ಇನ್ನೂ ಇಲ್ಲ" ಎಂದು ಹೇಳಿದರು. ನನ್ನ ಮೇಲಾಗಿದ್ದ ಪರಿಣಾಮ ಮಾಯವಾಯಿತು.

ಆದರೆ ಶಿವ ನನಗೆ ಬೇಕಾಗಿದ್ದನ್ನು ನೀಡಿದ್ದ!

ಇನ್ನೂ ಇಲ್ಲ ಎಂದು ಶ್ರೀ ಅರವಿಂದರು ಹೇಳಿದರು.

**(ಅನುಯಾಯಿಯೊಬ್ಬನೊಡನೆ ಮಾತುಕತೆ) – ಶ್ರೀಮಾತೆ**

*

ಹಿಂದೆ ನಾನು ಮತ್ತು ಶ್ರೀ ಅರವಿಂದರು ಆ ಮನೆಯಲ್ಲಿದ್ದಾಗ (ಆ ಮನೆಯನ್ನು ಈಗ "dormitory annex" ಎಂದು ಕರೆಯುತ್ತಾರೆ) ಅಲ್ಲಿದ್ದ ದೊಡ್ಡ ವರಾಂಡಾದಲ್ಲಿ ಸುತ್ತಾಟ (walking) ಮಾಡುತ್ತಿದ್ದೆ, (ಶ್ರೀ ಅರವಿಂದರು ತಮ್ಮ ಕೋಣೆಯಲ್ಲಿ ಕಾರ್ಯ ಮಾಡುತ್ತ ಕುಳಿತಿರುತ್ತಿದ್ದರು), ನಾನೊಬ್ಬಳೇ ಸುತ್ತಾಟ ಮಾಡುತ್ತಿದ್ದೆ, ಆದರೆ ನಾನು ಎಂದೂ ಏಕಾಂಗಿಯಾರಲಿಲ್ಲ, ಶ್ರೀಕೃಷ್ಣ ಅಲ್ಲಿ ಯಾವಾಗಲೂ ಇರುತ್ತಿದ್ದ – ದೇವ ಕೃಷ್ಣನೆಂದು ಪ್ರಸಿದ್ಧನಾದವನು, ಆದರೆ ಅವನು ಹೆಚ್ಚು ಎತ್ತರವಾಗಿದ್ದ, ಪಾಟಿಕಲ್ಲಿನ ನೀಲವರ್ಣದಂತಹ ಹಾಸ್ಯಾಸ್ಪದ ಬಣ್ಣ ಅವನದಾಗಿರಲಿಲ್ಲ. ಅದು ಹಾಗಿರಲಿಲ್ಲ. ನಾವು ಯಾವಾಗಲೂ ಅತ್ತಿಂದಿತ್ತ ಒಟ್ಟಿಗೆ ನಡೆದಾಡುತ್ತಿದ್ದೆವು. ಅವನು ನನಗಿಂತ ಸ್ವಲ್ಪ ಹಿಂದಿರುತ್ತಿದ್ದ (ಕತ್ತು ಮತ್ತು ತೋಳುಗಳ ಹಿಂಭಾಗಕ್ಕೆ ಎದುರಾಗಿ ಇರುವುದರ ಸೂಚನೆ) ನಾನು ಸ್ವಲ್ಪ ಮುಂದಿರುತ್ತಿದ್ದೆ, ನನ್ನ ತಲೆ ಅವನ ತೋಳುಗಳ ಮೇಲೆ ಇದೆಯೇನೋ ಎನ್ನುವ ಹಾಗಿತ್ತು ಮತ್ತು ಅವನು ನಡೆದಾಡುತ್ತಿದ್ದ. ನನ್ನ ತಲೆ ಅವನ ತೋಳುಗಳ ಮೇಲೆ ಒರಗಿಕೊಂಡಿದೆ ಎಂಬ ಭಾವನೆ ನನಗೆ ಬರುತ್ತಿದ್ದಿಲ್ಲ, ಆದರೆ ಅದಿದ್ದುದು ಹಾಗೆ. ನಾವು ನಡೆದಾಡುತ್ತಿದ್ದೆವು, ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದೆವು. ಅದು ಒಂದು ವರ್ಷಕ್ಕಿಂತ ಸ್ವಲ್ಪ ಹೆಚ್ಚು ಕಾಲ ಹಾಗಿತ್ತು, ಪ್ರತಿದಿನ ನಡೆಯುತ್ತಿತ್ತು. ನಂತರ ಅದು ಕೊನೆಗೊಂಡಿತು. ನಂತರ ಕಾಲಕಾಲಕ್ಕೆ ಅವನನ್ನು ನೋಡುತ್ತಿದ್ದೆ (ನಾವು ಹೊಸ ಮನೆಗೆ ಸ್ಥಳಾಂತರಗೊಂಡ ನಂತರ ನಾನವನನ್ನು ನೋಡಿದೆ) ಕೆಲವೊಮ್ಮೆ ರಾತ್ರಿ ಕಾಲದಲ್ಲಿ ನಾನು ಹೆಚ್ಚು ದಣಿದುಕೊಂಡಿದ್ದ ಸಮಯದಲ್ಲಿ ಅವನು ಬರುತ್ತಿದ್ದ, ನಾನು ಅವನ ತೋಳುಗಳ ಮೇಲೆ ನಿದ್ರಿಸುತ್ತಿದ್ದೆ. ಆದರೆ ಅದು ಶ್ರೀ ಅರವಿಂದರೇ ತೋರಿಸುತ್ತಿದ್ದ ಒಂದು ರೀತಿ ಎಂದು ನಾನು ಚೆನ್ನಾಗಿ ತಿಳಿದುಕೊಂಡಿದ್ದೆ. ನಂತರ ನಾನಿಲ್ಲಿಗೆ (ಸದ್ಯದ ಕೋಣೆಗೆ) ಬಂದಾಗ ಶ್ರೀ ಅರವಿಂದರು ದೇಹತ್ಯಾಗ ಮಾಡಿದ್ದರು. ನಾನು ನನ್ನ ಮಂತ್ರವನ್ನು ಪಠಿಸುತ್ತ ಸುತ್ತಾಟವನ್ನು ಪ್ರಾರಂಭಿಸಿದೆ. ಶ್ರೀ ಅರವಿಂದರು ಬಂದರು ಮತ್ತು ಶ್ರೀಕೃಷ್ಣನಿರುತ್ತಿದ್ದ ಜಾಗದಲ್ಲೇ ನಿಖರವಾಗಿ ಇರುತ್ತಿದ್ದರು, ನಾನು ನಡೆದಾಡುತ್ತಿದ್ದೆ, ಅವರು ಅಲ್ಲಿರುತ್ತಿದ್ದರು, ನಾವು ದಿನಂಪ್ರತಿ ಸುತ್ತಾಟ ಮಾಡುತ್ತಿದ್ದೆವು. ಅದು ಎಷ್ಟೊಂದು ಮೂರ್ತರೂಪದ್ದು, ಅದ್ಭುತವಾದದ್ದು ಆಗಿರುತ್ತೆಂದರೆ ನಾನು: "ಜನರ ಬಗ್ಗೆ ಹಾಗೂ ವಸ್ತು–ವಿಷಯಗಳ ಬಗ್ಗೆ ಕಾಳಜಿ ಏಕೆ ವಹಿಸಬೇಕು. ಈ ರೀತಿಯಲ್ಲಿ ಉಳಿದುಕೊಳ್ಳಲು ಬಯಸುತ್ತೇನೆ" ಎಂದು



ಯೋಚಿಸಲು ಪ್ರಾರಂಭಿಸಿದೆ. ಅವರು ನನ್ನ ಯೋಚನೆಯನ್ನು ಕಂಡುಕೊಂಡರು ಮತ್ತು "ನಾನು ಈ ನಂತರ ಬರುವುದಿಲ್ಲ" ಎಂದು ಹೇಳಿದರು. ಮತ್ತು ಅವರು ಬರುವುದನ್ನು ನಿಲ್ಲಿಸಿದರು. ನಾನು "ಸರಿ ಹಾಗೇ ಆಗಲಿ" ಎಂದುಕೊಂಡೆ. ಪರಮೋಚ್ಚ ಪ್ರಭುವನ್ನು ಕುರಿತು ಮಂತ್ರ ಜಪಿಸಲು ಪ್ರಾರಂಭಿಸಿದೆ. ಮತ್ತು ಶ್ರೀ ಅರವಿಂದರು ತಮ್ಮದೇ ರೂಪದಲ್ಲಿ ನನ್ನೊಡನೆ ಸುತ್ತಾಟ ಮಾಡಲು ಬರಲಿ ಎಂದು ಸಾಕಷ್ಟು ಪ್ರಯತ್ನ ಮಾಡಿದೆ.

**(ಅನುಯಾಯಿಯೊಬ್ಬನೊಡನೆ ಮಾತುಕತೆ, ಜೂನ 10/1968) – ಶ್ರೀಮಾತೆ**

*

### ದೈವೀಪ್ರಭುವಿತ್ತ ಭರವಸೆ ಮತ್ತು ದೃಢವಾದ ಶ್ರೇಷ್ಠ ಹೇಳಿಕೆ

ಪ್ರಭು, ಈ ದಿನ ಬೆಳಿಗ್ಗೆ, ನೀನು ನಿನ್ನ ಕಾರ್ಯ ಮುಗಿಯುವವರೆಗೆ ಕೇವಲ ಮಾರ್ಗದರ್ಶನ ಮಾಡುವ ಹಾಗೂ ಪ್ರಕಾಶ ನೀಡುವ ಪ್ರಜ್ಞೆಯ ರೂಪದಲ್ಲಷ್ಟೇ ಅಲ್ಲ. ಆದರೆ ಕ್ರಿಯೆಯಲ್ಲಿ ಕ್ರಿಯಾಶೀಲ ದೈವೀ ಸಾನ್ನಿಧ್ಯದ ರೂಪದಲ್ಲಿಯೂ ಕೂಡ ನಮ್ಮೊಡನೆ ಇರುವಿ ಎಂದು ದೃಢವಾಗಿ ಹೇಳಿರುವಿ. ನಿನ್ನೆಲ್ಲ ರೀತಿಯಿಂದ ಇಲ್ಲಿರುವಿ ಮತ್ತು ಪೃಥ್ವಿಯ ವಾತಾವರಣ ಪರಿವರ್ತನೆ ಹೊಂದುವವರೆಗೆ ನೀನದನ್ನು ಬಿಟ್ಟುಹೋಗುವುದಿಲ್ಲ ಎಂದು ತಪ್ಪರ್ಥ ಮಾಡಿಕೊಳ್ಳಲು ಅವಕಾಶ ನೀಡದ ರೀತಿಯಲ್ಲಿ ಭರವಸೆ ನೀಡಿರುವಿ. ನಾವು ಈ ಅದ್ಭುತ ದೈವೀ ಸಾನ್ನಿಧ್ಯಕ್ಕೆ ಯೋಗ್ಯರಾಗುವಂತಾಗಲಿ ಮತ್ತು ನಮ್ಮಲ್ಲಿರುವ ಎಲ್ಲವೂ ನಿನ್ನ ಘನತೆವೆತ್ತ ಕಾರ್ಯಕ್ಕೆ ತನ್ನನ್ನು ಮುಡಿಪಾಗಿರಿಸಿಕೊಳ್ಳುವಂತಾಗಲಿ ಎಂದು ಅನುಗ್ರಹಿಸು.

**(CWM, 13/16) – ಶ್ರೀಮಾತೆ**

*

### ಅನಂತ ಕೃತಜ್ಞತೆ

ನಾವು ತೋರಿಕೆಗಳಿಂದ ದಿಗ್ಭ್ರಮೆಗೊಳಗಾಗಬಾರದು. ಶ್ರೀ ಅರವಿಂದರು ನಮ್ಮನ್ನು ಬಿಟ್ಟುಕೊಟ್ಟು ಹೋಗಿಲ್ಲ. ಅವರು ಎಂದೆಂದಿನಿಂದ ಇದ್ದ ಹಾಗೆ ಅದೇ ರೀತಿಯಲ್ಲಿ ಜೀವಿಸುತ್ತ ಸಾನ್ನಿಧ್ಯ ಒದಗಿಸುತ್ತ ಇಲ್ಲಿದ್ದಾರೆ, ಮತ್ತು ಅವರ ಕಾರ್ಯವನ್ನು ಅವಶ್ಯವಾದ ಎಲ್ಲ ನಿಷ್ಕಾಪಟ್ಯ, ಉತ್ಸಾಹ ಹಾಗೂ ಏಕಾಗ್ರತೆ–ಗಳೊಂದಿಗೆ ಸಿದ್ಧಿಸಿಕೊಳ್ಳುವುದನ್ನು ನಮಗೆ ಬಿಟ್ಟುಕೊಡಲಾಗಿದೆ.

ಶ್ರೀ ಅರವಿಂದರು ಸತತ ನಮ್ಮ ಮಧ್ಯೆ ಇದ್ದಾರೆ ಮತ್ತು ಅವರನ್ನು ನೋಡಲು, ಅವರ ಧ್ವನಿ ಕೇಳಲು ತಯಾರಾದವರಿಗೆ ಅವರು ತಮ್ಮನ್ನು ತೆರೆದು ತೋರಿಸುತ್ತಾರೆ.

**(CWM, 13/7, 11)** **– ಶ್ರೀಮಾತೆ**

*

ಒಂದು ಮುಂದುವರಿಕೆಯನ್ನು ಸಿದ್ಧಿಸಿಕೊಳ್ಳುವ ಕಾರ್ಯ ಮನುಷ್ಯ ಮೇಲ್ಗಡೆ ಹೋಗಿ ಅಲ್ಲಿದ್ದುದನ್ನು ಕೆಳಗೆ ಭೌತದ್ರವ್ಯದಲ್ಲಿ ತರಲು ಅನುಮತಿ ನೀಡುತ್ತದೆ, ಈ ಕಾರ್ಯವನ್ನು ಪ್ರಜ್ಞೆಯ ಅಂತರಂಗದಲ್ಲಿ ಮಾಡಲಾಗುತ್ತದೆ. ಅದನ್ನು ಕೈಕೊಳ್ಳಬೇಕಾದ ಅವತಾರ ಪುರುಷ ಸೆರೆಮನೆಯಲ್ಲಿ ಸಿಕ್ಕಿ ಹಾಕಿಕೊಂಡಿರಲಿ, ಯಾರನ್ನೂ ನೋಡದೆ ಇರಲಿ, ಎಂದೂ ಹೊರಗೆ ಚಲಿಸದಂತಿರಲಿ, ಆದಾಗ್ಯೂ ಅವನು ಆ ಕಾರ್ಯವನ್ನು ಕೈಕೊಳ್ಳಬಲ್ಲ, ಏಕೆಂದರೆ ಅದು ಪ್ರಜ್ಞೆಯಲ್ಲಾಗುವ ಕಾರ್ಯ, ಅತಿಮಾನಸ ಹಾಗೂ ಭೌತಿಕ ಸತ್ತೆ ಇವುಗಳ ನಡುವೆ ಸಂಪರ್ಕ ಕಲ್ಪಿಸುವ ಕಾರ್ಯ. ಅವನನ್ನು ಗುರುತಿಸಬೇಕಾದ ಆವಶ್ಯಕತೆ ಇರುವುದಿಲ್ಲ, ಈ ಪ್ರಜ್ಞಾಪೂರ್ಣ ಸಂಕಲ್ಪವನ್ನು ಕಲ್ಪಿಸಲು ಶಕ್ತನಾಗುವುದಕ್ಕೆ ಅವನಲ್ಲಿ ಯಾವುದೇ ಬಾಹ್ಯ ಸಾಮರ್ಥ್ಯ ಇಲ್ಲದೆ ಹೋಗಬಹುದು. ಹಾಗಿದ್ದಾಗ್ಯೂ ಒಮ್ಮೆ ಆ ಸಂಪರ್ಕ ಉಂಟಾದಾಗ ಬಾಹ್ಯ ಜಗತ್ತಿನಲ್ಲಿ ಅದರ ಪರಿಣಾಮ ಹೊಸ ಸೃಷ್ಟಿಯ ರೂಪದಲ್ಲಿರುತ್ತದೆ, ಮಾದರಿ ಶಹರದಿಂದ ಪ್ರಾರಂಭಗೊಂಡು ಪರಿಪೂರ್ಣ ವಿಶ್ವದಲ್ಲಿ ಕೊನೆ ಕಂಡುಕೊಳ್ಳುತ್ತದೆ.

**(CWM, 13/7)** **– ಶ್ರೀಮಾತೆ**

*

ನಮ್ಮ ದೈವೀ ಪ್ರಭುವಿನ ಭೌತಿಕ ಆವರಣವಾಗಿದ್ದ ನಿನಗೆ ನಮ್ಮ ಅನಂತ ಕೃತಜ್ಞತೆ ಸಲ್ಲುತ್ತದೆ. ನಮಗಾಗಿ ಕೈಕೊಂಡ, ಸಂಘರ್ಷ ನಡೆಸಿದ, ವೇದನೆ ಅನುಭವಿಸಿದ, ಭರವಸೆ ತಾಳಿದ, ಎಷ್ಟೆಲ್ಲವನ್ನು ತಾಳಿಕೊಂಡ ನಿನ್ನೆದುರು, ನಮಗಾಗಿ ಎಲ್ಲವನ್ನೂ ಸಂಕಲ್ಪಿಸಿದ, ಪ್ರಯತ್ನಿಸಿದ, ತಯಾರು ಮಾಡಿದ, ಸಿದ್ಧಿಸಿಕೊಂಡ ನಿನ್ನೆದುರು, ನಿನಗೆ ಋಣಿಯಾಗಿರುವುದೆಲ್ಲವನ್ನೂ, ನಾವು ಕ್ಷಣಕಾಲ ಕೂಡ, ಮರೆಯದಂತೆ ಅನುಗ್ರಹಿಸೆಂದು ತಲೆ ಬಾಗಿ ಬೇಡುತ್ತೇವೆ, ಮೊರೆಯಿಡುತ್ತೇವೆ.

**(CWM, 13/7)** **– ಶ್ರೀಮಾತೆ**

*





ಶ್ರೀ ಅರವಿಂದರು ದೈವೀ ಪ್ರಭುವಿನ ಶಾಶ್ವತ ಅವತಾರ, ಅವರು ಯಾವಾಗಲೂ ನಮ್ಮೊಂದಿಗಿದ್ದಾರೆ ಮತ್ತು ನಾವು ಅವರೊಡನೆ ಸತತ ಸಂಪರ್ಕದಲ್ಲಿರಬಲ್ಲೆವು ಅದಕ್ಕಾಗಿ ಅವಶ್ಯವಾದುದೆಂದರೆ ನಾವು ಅವರನ್ನು ಸರಳವಾಗಿ ಪ್ರೀತಿಸುವುದಾಗಿದೆ.

**(White roses, p.3)** **– ಶ್ರೀಮಾತೆ**

*

## ಶ್ರೀ ಅರವಿಂದರ ವಾಸಸ್ಥಾನ

**ಪ್ರಶ್ನೆ :** *ಯಾರೋ ಒಬ್ಬರು ಶ್ರೀ ಅರವಿಂದರ ಕೋಣೆಗೆ ಮತ್ತೊಮ್ಮೆ ಹೋಗಿ, ಅಲ್ಲಿ ಕುಳಿತು ಕೆಲ ಕಾಲದವರೆಗೆ ಧ್ಯಾನ ಮಾಡಲು ಬಯಸುತ್ತಾರೆ.*

**ಶ್ರೀಮಾತೆ :** ಅಂತಹ ಶ್ರೇಷ್ಠ ಹಕ್ಕಿಗಾಗಿ ಅವನ ಅರ್ಹತೆಗಳೇನು ಹಾಗೂ ಹಕ್ಕುಗಳೇನು? ಮತ್ತೊಮ್ಮೆ ಭೇಟಿಮಾಡಲು ಬರುವುದು ಸರಿ, ಆದರೆ ಅಲ್ಲಿ ಕುಳಿತು ಧ್ಯಾನ ಮಾಡುವುದಕ್ಕೆ ಶ್ರೀ ಅರವಿಂದರಿಗಾಗಿ ಹೆಚ್ಚಿನದೇನನ್ನಾದರೂ ಕೈಕೊಂಡಿರ–ಬೇಕು.

**ಪ್ರಶ್ನೆ :** *ಮಧುರ ಮಾತೆಯವರೆ, ಶ್ರೀ ಅರವಿಂದರ ಕೋಣೆಯಲ್ಲಿ ಕುಳಿತು–ಕೊಳ್ಳುವುದಕ್ಕೆ ಹಾಗೂ ಧ್ಯಾನ ಮಾಡುವುದಕ್ಕೆ ಯಾರಿಗಾದರೂ ಅನುವು ಮಾಡಿಕೊಡಬೇಕಾದರೆ ಅವನು "ಶ್ರೀ ಅರವಿಂದರಿಗಾಗಿ ಹೆಚ್ಚಿನದೇನನ್ನಾದರೂ ಕೈಕೊಂಡಿರಬೇಕು" ಎಂದು ಹೇಳಿದ್ದೀರಿ. ಶ್ರೀಮಾತೆಯವರೆ ಅದರ ಅರ್ಥ ಏನು? ಇದರಷ್ಟಾಗುವುದಕ್ಕೆ ಮನುಷ್ಯ ದೈವೀ ಪ್ರಭುವಿಗಾಗಿ ಏನನ್ನು ಮಾಡಬಲ್ಲ?*

**ಶ್ರೀಮಾತೆ :** ಮನುಷ್ಯ ತನ್ನಲ್ಲಿ ಇರುವುದರ ಇಲ್ಲವೆ ಕೈಕೊಂಡುದುದರ ಇಲ್ಲವೆ ತಾನಾಗಿರುವುದರ ಸ್ವಲ್ಪ ಭಾಗವನ್ನು ಅವರಿಗೆ ಅರ್ಪಿಸಬೇಕು, ಎಂದರೆ ನಮ್ಮಲ್ಲಿರುವ ವಸ್ತುಗಳಲ್ಲಿ ಕೆಲವನ್ನು ಇಲ್ಲವೆ ನಮ್ಮ ವಶದಲ್ಲಿರುವ ಎಲ್ಲವನ್ನು ಅವರಿಗೆ ಅರ್ಪಿಸಬೇಕು ಇಲ್ಲವೆ ಏನನ್ನೂ ಕಾದಿರಿಸಿಕೊಳ್ಳದೆ ನಮ್ಮನ್ನು ಅವರಿಗೆ ಕೊಟ್ಟುಕೊಳ್ಳಬೇಕು, ಅದರಿಂದಾಗಿ ಅವರು ನಮ್ಮ ಸ್ವಭಾವವನ್ನು ವಶಕ್ಕೆ ತೆಗೆದುಕೊಂಡು ಅದನ್ನು ಪರಿವರ್ತಿಸುವಂತಾಗುವುದು, ದೈವೀಕರಣಗೊಳಿಸು–ವಂತಾಗುವುದು. ಆದರೆ ಏನನ್ನೂ ಕೊಡದೆ, ಯಾವಾಗಲೂ ತೆಗೆದುಕೊಳ್ಳಲು, ಸ್ವೀಕರಿಸಲು ಬಯಸುವ ಜನರು ಅನೇಕರಿದ್ದಾರೆ. ಅವರು ಸ್ವಾರ್ಥಿಗಳಾಗಿರುತ್ತಾರೆ, ಶ್ರೀ ಅರವಿಂದರ ಕೋಣೆಯಲ್ಲಿ ಕುಳಿತು ಧ್ಯಾನ ಮಾಡುವುದಕ್ಕೆ ಯೋಗ್ಯ–ರಾಗಿರುವುದಿಲ್ಲ.

**(CWM, 13/29–30)** **– ಶ್ರೀಮಾತೆ**

*

**ಶ್ರೀ ಅರವಿಂದರು ತಮ್ಮ ತೊಂಬತ್ತನೆಯ ಜನ್ಮದಿನದಂದು ನೀಡಿದ ಸುಂದರ ಕಾಣಿಕೆ**

... ಇಲ್ಲಿ ಅಗಸ್ಟ 15ರಂದು ಹತ್ತು ಗಂಟೆಗೆ ಧ್ಯಾನದ ಕಾರ್ಯಕ್ರಮವನ್ನು ಕೈಕೊಂಡಿದ್ದೆವು. ಹತ್ತು ಗಂಟೆಗೆ ಇನ್ನೂ ಹದಿನೈದು ನಿಮಿಷಗಳಿದ್ದಾಗ ನಾನು ಇಲ್ಲಿ ಮೇಜಿನ ಬಳಿ ಮೌನದಿಂದ ಕುಳಿತುಕೊಂಡಿದ್ದೆ ಮತ್ತು ನಂತರ ಶ್ರೀ ಅರವಿಂದರು ಬಂದರು ಎಂದು ಹೇಳಲಾರೆ, ಏಕೆಂದರೆ ಅವರು ಇಲ್ಲಿ ಸದಾ ಇದ್ದೇ ಇರುತ್ತಾರೆ, ಆದರೆ ಅವರು ತಮ್ಮನ್ನು ವಿಶೇಷ ರೀತಿಯಲ್ಲಿ ಪ್ರಕಟಗೊಳಿಸಿದರು... ಆ ಪ್ರಕಟಣೆ



ಸೂಕ್ಷ್ಮ ಭೌತಿಕದಲ್ಲಿ ಮೂರ್ತರೂಪದಲ್ಲಾಗಿತ್ತು. ಅವರು ಎತ್ತರವಾಗಿ ಬೆಳೆದು ಪದ್ಮಾಸನ ಹಾಕಿಕೊಂಡು ಕುಳಿತರು, ಅವರ ದೇಹ ಆಶ್ರಮದ ಇಡೀ ಆವರಣ (compound) ವನ್ನು ವ್ಯಾಪಿಸಿತ್ತು, ಅದನ್ನು ಸ್ವಲ್ಪ ದಾಟಿಕೊಂಡು ಕೂಡ ಹೋಗಿತ್ತು. ಅದೆಷ್ಟರ ಮಟ್ಟಿಗೆಂದರೆ ಧ್ಯಾನ ಮಾಡುತ್ತಿದ್ದ ಜನರು ಮುಚ್ಚಿ ಹೋಗಿರಲಿಲ್ಲ, ಅವರು ಶ್ರೀ ಅರವಿಂದರ ದೇಹದೊಳಗಿದ್ದರು. ಅವರು ಆ ರೀತಿ ಕುಳಿತುಕೊಂಡಿದ್ದರು. ಸೂಕ್ಷ್ಮ ಭೌತಿಕದಲ್ಲಿ ಅವರ ಸಾನ್ನಿಧ್ಯದಿಂದ ಉಂಟಾದ ಘರ್ಷಣೆಯ ಭಾವನೆ ನನಗೆ ಬರುತ್ತಿತ್ತು, ಅದು ಭೌತಿಕದಲ್ಲಾಗುವ ಘರ್ಷಣೆಯ ಹಾಗೆಯೇ ಇತ್ತು. ನಾನು ಆ ರೀತಿ ಅವರು ಅಲ್ಲಿ ಕುಳಿತದ್ದನ್ನು ನೋಡಿದೆ, ಬಹಳ ಎತ್ತರವಾಗಿದ್ದರು, ಪರಿಪೂರ್ಣವಾಗಿ ಪ್ರಮಾಣಬದ್ಧವಾಗಿದ್ದರು; ಮತ್ತು ನಂತರ ಮೃದುವಾದ ರೀತಿಯಲ್ಲಿ ಅವರೋಹಣ ಮಾಡಲು ಪ್ರಾರಂಭಿಸಿದರು – ಈ ಅವರೋಹಣವೇ ಘರ್ಷಣೆ (friction) ಯನ್ನು ಉಂಟುಮಾಡಿತ್ತು, ಆ ಅವರೋಹಣ ಜನರಿಗೆ ಆಘಾತವನ್ನುಂಟು ಮಾಡುವ ರೀತಿಯದಾಗಿರಲಿಲ್ಲ. ನಂತರ ಅವರು ಅಲ್ಲಿ ಅರ್ಧಗಂಟೆಗಿಂತಲೂ ಸ್ವಲ್ಪ ಹೆಚ್ಚು ಕಾಲ ನೆಲೆಸಿದ್ದರು ಹಾಗೂ ಉಳಿದುಕೊಂಡಿದ್ದರು, ಸಂಪೂರ್ಣವಾಗಿ ನಿಶ್ಚಲರಾಗಿದ್ದರು, ಆದರೆ ಅಲ್ಲಿದ್ದ ಜನರ ಮೇಲೆ ಪೂರ್ತಿಯಾಗಿ ಏಕಾಗ್ರತೆ ವಹಿಸಿದ್ದರು – ಆ ಜನರು ಅವರೊಳಗಿದ್ದರು.

ನಾನಿಲ್ಲಿ ಮುಗುಳ್ನಗುತ್ತ ಕುಳಿತಿದ್ದೆ, ಬಹುಮಟ್ಟಿಗೆ ನಿಜವಾಗಿ ನಗುತ್ತಲಿದ್ದೆ, ಎಲ್ಲೆಡೆಗೆ ಅವರಿಸಿರುವ ಭಾವನೆಯನ್ನು ನೀವು ತಂದುಕೊಳ್ಳಬಹುದಾಗಿತ್ತು. ಅಲ್ಲಿ ಹೆಚ್ಚಿನ ಮಟ್ಟದ ಶಾಂತಿಯಿತ್ತು; ಶಾಂತಿ, ಶಕ್ತಿ, ಸಾಮರ್ಥ್ಯಗಳು ಅದ್ಭುತ ರೀತಿಯಲ್ಲಿದ್ದವು. ಶಾಶ್ವತತೆ, ಭವ್ಯತೆ ಮತ್ತು ಪರಿಪೂರ್ಣತೆಗಳು ಇರುವ ಭಾವನೆಯಿತ್ತು. ಎಲ್ಲವೂ ನೆರವೇರಿಕೆ ಕಂಡುಕೊಂಡಿದೆ ಎಂದು ಹೇಳಬಹುದಾದ ಪರಿಪೂರ್ಣತೆಯಲ್ಲಿ ಮನುಷ್ಯ ಜೀವಿಸುತ್ತಿರುವ ಹಾಗಿರುವ ಭಾವನೆಯಿತ್ತು. ಅದು ಒತ್ತಾಯ ತರುತ್ತಲಿತ್ತು. ಅದನ್ನು ತಂದುಕೊಳ್ಳದವ ಸ್ಪಷ್ಟವಾಗಿ ಜಡತ್ವದಲ್ಲಿರುವ ಮನುಷ್ಯನಾಗಿದ್ದ. ಮತ್ತು ನಂತರ ಅವರು ಒಮ್ಮೆಗೆ ಹೊರಟುಹೋದ ಹಾಗಿರಲಿಲ್ಲ, ಏನೋ ಒಂದು ಆವಿಯ ರೂಪದಲ್ಲಿ ಹಾರಿ ಹೋಗುತ್ತಿರುವ ಹಾಗೆ ಬಹಳ ನಿಧಾನಗತಿಯಿಂದ ಅವರು ಹೊರಟುಹೋದರು. ನಂತರ ವಿಷಯಗಳು ಸಾಮಾನ್ಯ ಸ್ಥಿತಿಗೆ ಮರಳಿ ಹೋದವು, ಅಲ್ಲಲ್ಲಿ ವೈವಿಧ್ಯಮಯ ಏಕಾಗ್ರತೆಗಳು ಹಾಗೂ ಚಟುವಟಿಕೆಗಳಿದ್ದವು. ...

ಕೆಲವರಿಗೆ ಅದರ ಬಗ್ಗೆ ಭಾವನೆ ಬಂದಿರಬಹುದು ಎಂದು ನನಗನಿಸುತ್ತದೆ. – ಅವರು ಅದನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳದೆ ಇರಬಹುದು; ಏಕೆಂದರೆ ಅವರಲ್ಲಿ ಸಮಗ್ರ ದೃಷ್ಟಿ ಇರಲಿಲ್ಲ, ಆದರೆ ಅವುಗಳಲ್ಲಿ ಅವರು ಅವರೋಹಣ ಮಾಡುತ್ತಿದ್ದ ಭಾವನೆ ತಂದುಕೊಂಡಿರಬಹುದು. ಏಕೆಂದರೆ ಅಪರಾಹ್ನದಲ್ಲಿ ಎಲ್ಲವೂ ಸಾಮಾನ್ಯ ಸ್ಥಿತಿಗೆ ಬಂದ ನಂತರ (ಶ್ರೀ ಅರವಿಂದರು ಸಹಜವಾಗಿ ಸದಾ ಇಲ್ಲಿರುತ್ತಾರೆ, ಆದರೆ ಆ ರೀತಿಯಲ್ಲಲ್ಲ), ಅಲ್ಲಿ ಒಂದು ಬಗೆಯ ವಿಷಾದದ ತರಂಗ ವಾತಾವರಣದಲ್ಲಿ ಹಾದುಹೋಗುತ್ತಿತ್ತು, ಯಾರೋ ಒಬ್ಬರು "ಓಹ್ ಈಗ ಸುಂದರವಾಗಿದ್ದ ಈ ಕಾರ್ಯ ಕೊನೆಗೊಂಡಿತು; ಅಗಸ್ಟ 15ರ ಕಾರ್ಯಕ್ರಮ ಮುಗಿಯಿತು!" ಎಂದು ಹೇಳುತ್ತಿದ್ದ ಹಾಗಿತ್ತು. ಆದರೆ ಅದು ನಾನು ವರ್ಣನೆ ಮಾಡಿದ ಹಾಗಿತ್ತು, ಹಾಗಿದ್ದ ಏನೋ ಒಂದಾಗಿತ್ತು. ಮೂರ್ತರೂಪಕ್ಕಿಂತಲೂ ಹೆಚ್ಚಿನದಾಗಿತ್ತು. ಅದನ್ನು ಹೇಗೆ ಹೇಳಬೇಕೆಂಬುದು ನನಗೆ ತಿಳಿಯದು. ಅದರ ಸುತ್ತ ಪರಿಪೂರ್ಣತೆಯಿದ್ದ ಭಾವನೆಯಿತ್ತು. ಬಹಳಷ್ಟು ಸಲ ನಾನು ಅವರನ್ನು ಅತಿಮಾನಸ ಪ್ರಕಾಶದಲ್ಲಿ ನೋಡಿದ್ದೇನೆ. ಅವರು ಮೇಲಿಂದ ಮೇಲೆ ಆ ರೀತಿಯಲ್ಲಿ ಬಂದಿದ್ದಾರೆ, (ನಾನು ಬಾಲ್ಕನಿ ದರ್ಶನ ನೀಡುವುದಕ್ಕೆ ಹೋದಾಗ ಬರುತ್ತಿದ್ದರು, ಕೆಲವೊಮ್ಮೆ ಸಮಾಧಿಯ ಮೇಲೆ ಇರುತ್ತಿದ್ದರು, ಬಹಳಷ್ಟು ಸಲ ಬರುತ್ತಿದ್ದರು.) ಆದರೆ ಅಂತಹದು ಮೊಟ್ಟಮೊದಲಿಗೆ ಆಗಿತ್ತು, ಅಲ್ಲಿ ಪರಿಮಾಣಗಳು ಭವ್ಯವಾಗಿದ್ದವು. ಕುಳಿತುಕೊಂಡು ಅವರು ಆಶ್ರಮದ ಆವರಣದಾಚೆಗೆ ಚಾಚಿಕೊಂಡು ಹೋಗಿದ್ದರು. ಮೂರ್ತಗೊಂಡಿದ್ದ ಅವರ ಬಗ್ಗೆ ಭೌತಿಕವಾಗಿ ಭಾವನೆ ತಂದುಕೊಳ್ಳುವಂತಿತ್ತು. ಅಲ್ಲಿ ಅದೆಂತಹ ಗಾಢನಂಬಿಕೆ, ಸಂತೋಷ, ನಿಶ್ಚಿತತೆ ಇದ್ದವೆಂದರೆ ಪ್ರತಿಯೊಂದು ಎಷ್ಟೊಂದು ನಿಸ್ಸಂದೇಹವಾದದ್ದಾಗಿತ್ತೆಂದರೆ ಅದು ಒಟ್ಟಿನಲ್ಲಿ ಎಲ್ಲವನ್ನೂ ಸಿದ್ಧಿಸಿಕೊಳ್ಳಲಾಗಿದೆ ಎನ್ನುವ ರೀತಿಯಲ್ಲಿತ್ತು.

ನಾವು ಆಚರಿಸಿದ ಅಗಸ್ಟ 15ರ ದಿನಾಚರಣೆಗಳಲ್ಲಿ ಅದು ಅತ್ಯಂತ ಸುಂದರವಾಗಿತ್ತು.

(ಮೌನ)

ಅವರ ಎಲ್ಲ ಮಾಧುರ್ಯ, ಎಲ್ಲ ಭವ್ಯತೆ, ಅವರ ಎಲ್ಲ ಸಾಮರ್ಥ್ಯ, ಎಲ್ಲ ಸ್ಥಿರತೆ ಅಲ್ಲಿದ್ದವು. ಅವರು ದೇಹದಲ್ಲಿ ಇದ್ದಾಗ ಇದ್ದುದಕ್ಕಿಂತ ಬಹಳ ಬಲವತ್ತರವಾಗಿದ್ದವು!



ನನ್ನ ಅನಿಸಿಕೆ ಯಾವಾಗಲೂ ಅದೇ ರೀತಿಯದಾಗಿರುತ್ತಿತ್ತು. ಅವರ ಕೋಣೆಯಲ್ಲಿ ಅದು ಹಾಗಿರುತ್ತಿತ್ತು. ನಾನು ಅವರನ್ನು ಭೇಟಿ ಮಾಡಿದಾಗೆಲ್ಲ ನನಗೆ ಅದೇ ಅನಿಸಿಕೆ ಇರುತ್ತಿತ್ತು. ಮತ್ತು ನಾನು ಕಾರ್ಯ ಮಾಡುತ್ತಿದ್ದಾಗಲೂ, ಎಲ್ಲ ಕಾಲದಲ್ಲಿ, ಅವರು ಪ್ರತಿಯೊಂದನ್ನು ಕೈಕೊಳ್ಳುತ್ತ ನನ್ನ ಹಿಂದೆ ಇರುತ್ತಿದ್ದ ಭಾವನೆ ಬರುತ್ತಿತ್ತು. ಆದರೆ ಈ ಅನುಭವ ಬಹಳ ಬಲವತ್ತರವಾಗಿತ್ತು, ಅದರಲ್ಲಿ ಮನುಷ್ಯ ಸಿಕ್ಕಿ ಹಾಕಿಕೊಂಡ ಹಾಗೆ, ಅದರ ಹೊರಗೆ ಬರಲು ದಾರಿ ಕಾಣದೆ ಇದ್ದ ಹಾಗಿತ್ತು. ಅದಿದ್ದುದು ಹಾಗೆ. ಪರಿಣಾಮ ಏನೋ ಒಂದು ಪರಿಪೂರ್ಣವಾದ ಹಾಗಿದ್ದಿತು.

**(ಅನುಯಾಯಿಯೊಬ್ಬನೊಡನೆ ಮಾತುಕತೆ, ಅಗಸ್ಟ 18, 1962) – ಶ್ರೀಮಾತೆ**

*

### ಶ್ರೀ ಅರವಿಂದರು ಸೂಕ್ಷ್ಮ ಭೌತಿಕದಲ್ಲಿ ನೆಲೆಸಿದ್ದಾರೆ

ಆಂತರಿಕ ಆಧಾರ ಕಂಡುಕೊಳ್ಳುವುದಕ್ಕಾಗಿ ಆಂತರಿಕ ಸತ್ತೆಯ ಭವ್ಯ ಗುಹೆಯಲ್ಲಿ ಮುಳುಗು ಹಾಕಬೇಕು, ಕೆಳಗೆ ಹೆಚ್ಚು ಹೆಚ್ಚಾಗಿ ಸ್ತರದಿಂದ ಸ್ತರಕ್ಕೆ, ಪ್ರಜ್ಞೆಯಿಂದ ಪ್ರಜ್ಞೆಗೆ, ಎಲ್ಲ ಗುರುತುಗಳನ್ನು ಹಿಂದೆ ಬಿಟ್ಟುಕೊಟ್ಟು ಅವರೋಹಣ ಮಾಡುತ್ತಲೇ ಹೋಗಬೇಕು ಮತ್ತು ಪ್ರಶಾಂತತೆಯಿರುವ ಶಾಂತಿಯನ್ನು ಕಂಡುಕೊಳ್ಳಲು ಆಳಾತಿ ಆಳಗಳಲ್ಲಿ ಪ್ರವೇಶಿಸಬೇಕು. ಬಾಹ್ಯ ಗದ್ದಲದಿಂದ, ತಳಮಳದಿಂದ ಮತ್ತು ನೋವಿನಿಂದ, ಯೋಚನೆಗಳು ಹಾಗೂ ಕಲ್ಪನೆಗಳಿಂದ ಸಂವೇದನೆಗಳ ತರಂಗಗಳಿಂದ ಬಹಳ ದೂರ ಇರುವ ಸತ್ತೆಯ ಈ ಭವ್ಯ ಅಚಂಚಲತೆಯಲ್ಲಿ ದೈವೀ ಸಾನ್ನಿಧ್ಯವನ್ನು ಭಾವನೆಗೆ ತಂದುಕೊಳ್ಳಲು, ಅಹಂಕಾರ ಅಸ್ತಿತ್ವದಲ್ಲಿರದೇ ಇರುವಲ್ಲಿ ಪ್ರವೇಶಿಸಬೇಕು. ಅಲ್ಲಿ ಇನ್ನೂ ಮುಂದೆ ಸಾಗಿ ಹೋಗುವುದಿರುತ್ತದೆ, ಇನ್ನೂ ಹೆಚ್ಚು ಶೋಧಿಸುವುದಿರುತ್ತದೆ, ಸರ್ವಸಮರ್ಥ ದೈವೀಸಾಮರ್ಥ್ಯ ಕಂಪಿಸುತ್ತಿರುವಲ್ಲಿ ಪ್ರಜ್ಞೆಯನ್ನು ಅಂತರಂಗದಲ್ಲಿ ಹೊರಳಿಸುವು– ದಿರುತ್ತದೆ, ಅದೆಲ್ಲ ಪ್ರತಿಯೊಂದನ್ನು ಸಿದ್ಧಿಸಿಕೊಳ್ಳುತ್ತದೆ. ಮನುಷ್ಯ ಇನ್ನೂ ಹೆಚ್ಚಿನ ಆಳದಲ್ಲಿಳಿದು ಹೋಗಬೇಕು ಅಲ್ಲಿ ಕ್ರಿಯೆ, ಗುರುತು, ಅಹಂಕಾರ, ಪ್ರತ್ಯೇಕ ಆತ್ಮ ಇವುಗಳಾವೂ ಇರುವುದಿಲ್ಲ, ಕೇವಲ ಸಂತೋಷ ಮತ್ತು ಪ್ರತಿಯೊಂದರ ಮೂಲದಲ್ಲಿರುವ ಕಂಪನ, ಸಮಾನವಾದದ್ದು, ಪರಿಪೂರ್ಣ ಸಮತೆ ಇವೆಲ್ಲ ಇರುತ್ತವೆ. ಈ ಪರಿಪೂರ್ಣ, ಬದಲಾಗದ ಶಾಂತಿಯಲ್ಲಿ ಅನುಭವ ಹಾಗೂ ಏಕತೆ ಪಡೆಯುವುದು, ನಂತರ ಆ ಪ್ರಶಾಂತ ದಿವ್ಯಾನಂದದಲ್ಲಿ ಪ್ರವೇಶಿಸುವುದು, ಅಲ್ಲಿ ಪ್ರಜ್ಞೆ ಕೇಂದ್ರ ಸತ್ತೆಯೊಡನೆ ಸಂಪೂರ್ಣವಗಿ ತಾದಾತ್ಮ್ಯ ಹೊಂದಿರುತ್ತದೆ. ಅಲ್ಲಿ ಇನ್ನು

ಮುಂದೆ ದ್ವಂದ್ವವಿರುವುದಿಲ್ಲ, ಅಸ್ತಿತ್ವವಿರುವುದಿಲ್ಲ, ಏನೇನೂ ಇರುವುದಿಲ್ಲ – ಈ ಅಮರ ಜ್ಯೋತಿಯ ಕಿಡಿ, ಅಂತರ್ಗತ ಭಗವಂತ, ಅನನ್ಯ ಹಾಗೂ ಏಕೈಕನಾದವನು ಆಗಿರುವವನು ನಮ್ಮಲ್ಲಿ ವಾಸಿಸುತ್ತಿರುವ ದಿವ್ಯಾತ್ಮನಾಗಿರುತ್ತಾನೆ.

ಮತ್ತು ಇನ್ನೂ ಹೆಚ್ಚು ಆಳವಾದುದರಲ್ಲಿರುವ ಈ ಪರಿಶುದ್ಧ ದೈವೀ ಜ್ವಾಲೆಯಲ್ಲಿ ಶ್ರೀ ಅರವಿಂದರು ವಾಸಿಸುತ್ತಾರೆ – ಅಲ್ಲಿ ಬದಲಾಗದ ಆನಂದವಿದೆ, ಸರ್ವಸಾಮರ್ಥ್ಯವಿದೆ, ಅಜೇಯವಾದದ್ದಿದೆ, ನಮ್ಮ ಅಸ್ತಿತ್ವದ ಪರಮೋಚ್ಚ ಪ್ರಭುವಿದ್ದಾನೆ, ಅಸ್ತಿತ್ವದಲ್ಲಿಯ ಸರ್ವವ್ಯಾಪಿತ್ವದ ಪ್ರಕಟಣೆಯಿದೆ, ಅವನ ಪರಿಣಾಮಕಾರಿತ್ವಗಳ ಸರ್ವಶಕ್ತಿಯಿದೆ, ಪ್ರಕಟವಾದ ಪರಮೋಚ್ಚ ಸಾಮರ್ಥ್ಯದ ಸರ್ವಜ್ಞತೆಯಿದೆ, ಅಲ್ಲಿ ದೈವೀ ಗುರಿಯಾದವನು, ದೈವೀ ಗುರು, ದೈವೀ ಪ್ರೇಮಿ ಇದ್ದಾನೆ – ಅವನೇ ಪರಮೋಚ್ಚ ಪ್ರಭುವಾಗಿದ್ದಾನೆ.

*

## ಶ್ರೀ ಅರವಿಂದರ ಹೆಸರಿನಲ್ಲಿರುವ ದೈವೀ ಸಾಮರ್ಥ್ಯ

ಅವರಿಗೆ ಮನುಷ್ಯ ನಿಜವಾದ ಕರೆ ಕೊಟ್ಟರೆ ಅಲ್ಲಿಂದ (ಶ್ರೀಮಾತೆಯವರು ಹೃದಯವಿರುವ ಸ್ಥಾನವನ್ನು ತೋರಿಸುತ್ತಾರೆ) ಶ್ರೀ ಅರವಿಂದರು ಉತ್ತರ ನೀಡುತ್ತಾರೆ. ಅದು ಅವರ ಹೆಸರಿನಿಂದ ಕಂಪಿಸುತ್ತದೆ, ಅಲ್ಲಿ ಶ್ರೀ ಅರವಿಂದರ ಹೆಸರು ಪ್ರತಿಧ್ವನಿತವಾಗುತ್ತದೆ, ಏಕೆಂದರೆ ಅಲ್ಲಿ ಅವರ ಗುರುತಿದೆ.

ಆಳಗಳಲ್ಲಿ ವಾಸಿಸುವವರು ಅವರೇ ಆಗಿದ್ದಾರೆ... ಎಲ್ಲ ಅಸ್ತಿತ್ವ ಅವರ ಮೂಲಕ ಜೀವಿಸುತ್ತದೆ.

ಅದು ಅವರ ಮೂಲಕ ಕಂಪಿಸುತ್ತದೆ. ತಮ್ಮ ದೈವೀ ಸಾನ್ನಿಧ್ಯದ ಮೂಲಕ ಚೈತನ್ಯ ತುಂಬುತ್ತ, ಕಂಪಿಸುತ್ತ ಅಲ್ಲಿ ಅವರು ಎಲ್ಲದರಲ್ಲಿದ್ದಾರೆ.

ಅವರ ದೈವೀ ಹೆಸರಿನ ದಿವ್ಯಾನಂದ ಎಲ್ಲದರಲ್ಲಿ ಒಳನುಗ್ಗುತ್ತದೆ ಮತ್ತು ಎಲ್ಲವನ್ನೂ ಪರಿಶುದ್ಧಗೊಳಿಸುತ್ತದೆ, ಸನಾತನ ಮತ್ತು ನಿಜವಾದ ಘನತೆವೆತ್ತ ಸಂತೋಷದಲ್ಲಿ ಧ್ವನಿಯನ್ನುಂಟು ಮಾಡುತ್ತದೆ ಮತ್ತು ಪ್ರತಿಧ್ವನಿಸುತ್ತದೆ. ಅವರ ದೈವೀ ಹೆಸರಿನೊಂದಿಗೆ ಅಸ್ತಿತ್ವ ಅರ್ಥ ಪಡೆದುಕೊಳ್ಳುತ್ತದೆ. ಈ ವಿಶ್ವದಲ್ಲಿರುವ ಎಲ್ಲದರಲ್ಲಿ ಅಡಗಿರುವ ಸರ್ವವ್ಯಾಪಿ ಭಗವಂತನನ್ನು ಮತ್ತೆ ಶೋಧಿಸುವುದು, ಕಂಡುಕೊಳ್ಳುವುದು ಸನಾತನ ಲೀಲೆಯಾಗಿದೆ. ಅವರನ್ನು ಭಾವನೆಗೆ



ತಂದುಕೊಳ್ಳುವುದು ಪರಿಪೂರ್ಣ ಪರಿಶುದ್ಧತೆಯ ಬದಲಾಗದ ದೈವೀ ಶಾಂತಿಯನ್ನು ಭಾವನೆಗೆ ತಂದುಕೊಂಡ ಹಾಗಿರುತ್ತದೆ. ಅವರಿಗೆ ಕರೆ ಕೊಡುವುದೆಂದರೆ ಅನಂತತೆಯ ದ್ವಾರಗಳನ್ನು ತೆರೆದಿರಿಸಿದ ಹಾಗೆ.

ನಾನು ಆ ಸನಾತನ ದೈವೀ ಜ್ವಾಲೆಯಲ್ಲಿ ಒಂದು ಸಾನ್ನಿಧ್ಯವಿದ್ದ ಹಾಗಿದ್ದೇನೆ, ಆ ಸಾನ್ನಿಧ್ಯ ಕ್ರಿಯೆಯನ್ನು ಸಚೇತನಗೊಳಿಸುತ್ತದೆ, ಪ್ರಾರಂಭಿಸುತ್ತದೆ, ಎಲ್ಲವನ್ನೂ ಮಧುರವಾದದ್ದನ್ನಾಗಿ ಹಾಗೂ ಶಾಂತಿಪೂರ್ಣವಾದದ್ದನ್ನಾಗಿ ಮಾಡಿ ಪ್ರತಿಯಾಗಿ ಕೊಡುತ್ತದೆ, ತುಂಬಿ ಹರಿಯುವ ಮತ್ತು ಘನತೆ ನೀಡುವ ಸಂತೋಷವಾಗಿರುತ್ತದೆ, ಪರಿಶುದ್ಧಗೊಳಿಸುವ ದೈವೀ ಪ್ರಕಾಶವಾಗಿರುತ್ತದೆ ಮತ್ತು ಸಮ್ಮತಿ ನೀಡುವ ದೈವೀ ಕಂಪನವಾಗಿರುತ್ತದೆ.

ಶ್ರೀ ಅರವಿಂದರು ಅಲ್ಲಿ ಪೋಷಣೆ ನೀಡುವ ಅಸ್ತಿತ್ವದ ಹಾಗಿದ್ದಾರೆ, ಮತ್ತು ನಾನು ದೈವೀ ಮಾರ್ಗದರ್ಶಕಳ ಹಾಗಿದ್ದೇನೆ. ವಾಸ್ತವದಲ್ಲಿ ಅದು ಇಬ್ಬರಲ್ಲಿರುವ ಏಕೈಕ ಅಸ್ತಿತ್ವ. ಒಬ್ಬರು ಸಾಕ್ಷಿಯಾಗಿ ಅವಲೋಕಿಸುತ್ತಾರೆ, ಇನ್ನೊಬ್ಬರು ಶಕ್ತಿ ರೂಪದಲ್ಲಿ ಪರಿಣಾಮಕಾರಿಯಾಗಿಸುತ್ತಾರೆ.

ಅದನ್ನು ಅರ್ಥಮಾಡಿಕೊಂಡಿರದೆ ಇರುವವರೆಗೆ ಮನುಷ್ಯ ಏನನ್ನೂ ಅರಿತುಕೊಳ್ಳಲಾರ.

ಹೌದು ಮಗು, ಒಂದೇ ವಿಷಯವಾಗಿರುವವರು, ಭೇದವಿಲ್ಲದವರು ಎಂದು ಶ್ರೀ ಅರವಿಂದರನ್ನು ಮತ್ತು ನನ್ನನ್ನು ಗುರುತಿಸುವವರಿಗೆ ಎಲ್ಲ ಅಡೆತಡೆಗಳು, ತೊಂದರೆಗಳು, ಎಲ್ಲ ಬಲೆಗಳು, ದೈವೀಸತ್ಯದತ್ತ ಮುನ್ನಡೆಯುತ್ತಿರುವವರಿಗೆ ಅಡ್ಡಿಯಾಗುವಂತಹವು ಎಲ್ಲವೂ ತೊಡೆದು ಹೋಗುತ್ತವೆ, ಅವುಗಳನ್ನು ಎಲ್ಲ ಕಾಲಕ್ಕೆ ತೆಗೆದು ಹಾಕಲಾಗಿರುತ್ತದೆ – ಕೇವಲ ಈ ಜನ್ಮಕ್ಕಾಗಿಯಷ್ಟೇ ಅಲ್ಲ, ಮೃತ್ಯುವಿನ ನಂತರ ಮತ್ತು ಶಾಶ್ವತ ಕಾಲದವರೆಗೆ ಬರಲಿರುವ ಜನ್ಮಗಳಿಗಾಗಿಯೂ ಕೂಡ ತೆಗೆದು ಹಾಕಲಾಗಿರುತ್ತದೆ.

ಹೌದು, ಅವರಿಗಾಗಿ ದೈವೀಪ್ರಭು ಸರ್ವಸಮರ್ಥನಾಗಿರುತ್ತಾನೆ. ಮತ್ತೆ ಹೇಳುವುದಾದರೆ "ಮಾ–ಶ್ರೀ ಅರವಿಂದರು, ಮಾ–ಶ್ರೀ ಅರವಿಂದರು" (ಸಮಾಧಿ) ಅದಿಷ್ಟು ಸಾಕಾಗುತ್ತದೆ.

**(The Supreme, p.62-64)** **– ಶ್ರೀಮಾತೆ**

*

**ಅನುಬಂಧ:**

## ಶ್ರೀ ಅರವಿಂದರ ಕರುಣೆ

ಬೆಳಗಿನ ಕಾಲ, ಸುಮಾರು 5 ಗಂಟೆಯಾಗಿರಬಹುದು. ಎಂದಿನಂತೆ ನಾನು ಪರಮ ಪವಿತ್ರವಾಗಿದ್ದ ಮನೆಗೆ ಹೋಗಿದ್ದೆ. ಅಲ್ಲಿ ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ವಾಸಿಸುತ್ತಿದ್ದರು. ಅವರಿದ್ದ ಮನೆಯ ಒಂದು ಭಾಗವನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ಅವರು ನನಗೆ ದಯಪಾಲಿಸಿದ್ದರು. ಶ್ರೀಮಾತೆಯವರೇ ಸ್ವತಃ ಬಾಗಿಲನ್ನು ತೆರೆಯುತ್ತಿದ್ದರು, ನಾನು ಒಳಗೆ ಪ್ರವೇಶಿಸಿ ಆ ಆನಂದದಾಯಕ ಕಾರ್ಯವನ್ನು ಕೈಕೊಳ್ಳುತ್ತಿದ್ದೆ.

ಆದರೆ ಒಂದು ದಿನ ಬಾಗಿಲನ್ನು ತೆರೆದ ನಂತರ ಶ್ರೀಮಾತೆಯವರು ಇನ್ನೂ ಅಲ್ಲಿ ನಿಂತುಕೊಂಡಿದ್ದರು ಮತ್ತು ನಾನು ಬಹಳ ಕಾಳಜಿ ವಹಿಸಬೇಕೆಂದೂ, ಶಾಂತ ರೀತಿಯಿಂದ ವರ್ತಿಸಬೇಕೆಂದೂ ಶ್ರೀ ಅರವಿಂದರ ಹೆಸರಿನಲ್ಲಿ ಹೇಳಿದರು, ಅದರಿಂದಾಗಿ ಮಧ್ಯ ಬಾಗಿಲಿನ ತುದಿಯ ಮೇಲೆ ವಿಶ್ರಾಂತಿ ಪಡೆಯುತ್ತಿದ್ದ ಗುಬ್ಬಿಗೆ ತೊಂದರೆ ಉಂಟಾಗಬಾರದಿತ್ತು. ಅದನ್ನು ದೈವೀ ಆಜ್ಞೆ ಎಂದು ಭಾವಿಸಿದೆ ಮತ್ತು ಕಾಳಜಿಪೂರ್ವಕ ವರ್ತಿಸುವೆನೆಂದು ಭರವಸೆ ನೀಡಿದೆ. ನಂತರ ಒಳಗೆ ಹೆಜ್ಜೆ ಇರಿಸಿದೆ, ಶ್ರೀಮಾತೆಯವರು ಹಿಂತಿರುಗಿ ಹೋದರು. ಸ್ವಲ್ಪವೂ ಸದ್ದು–ಗದ್ದಲ ಮಾಡದಂತೆ ನಾನು ಆ ಬಾಗಿಲನ್ನು ದಾಟಿ ಮುಂದೆ ಹೋದೆ. ನನಗೆ ಆಶ್ಚರ್ಯ ಹಾಗೂ ಆನಂದ ಉಂಟುಮಾಡುವ ಹಾಗೆ ಆ ಗುಬ್ಬಿ ಬಾಗಿಲಿನ ತುತ್ತ ತುದಿಯ ಮೇಲೆ ಅಲುಗಾಡದೆ ಕುಳಿತಿದ್ದನ್ನು ನೋಡಿದೆ.

ನಮ್ಮ ಪ್ರಭು ಎಷ್ಟೊಂದು ದಯಾಪರರಾಗಿದ್ದಾರೆ ಎಂಬುದನ್ನು ನೋಡಿ ನನ್ನ ಹೃದಯ ತುಂಬಿ ಬಂದಿತು. ಅವರು ರಾತ್ರಿ ಕಾಲ ತಮ್ಮ ಸುತ್ತಾಟದ ಕಾರ್ಯಕ್ರಮವನ್ನು ಹಜಾರಿನಲ್ಲಿ ನಡೆಸುತ್ತಿದ್ದರು. ಮತ್ತು ಅಲ್ಲಿ ಯಾವಾಗಲೂ ಉಪಸ್ಥಿತವಿರುವ ಶಾಂತಿಪೂರ್ಣ ವಾತಾವರಣದಲ್ಲಿ ಆ ಚಿಕ್ಕ ಪ್ರಾಣಿ ತನ್ನ ರಾತ್ರಿ ಕಾಲದ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದುದನ್ನು ಅವರು ಗಮನಿಸಿದ್ದರು. ಅವರ ಕರುಣೆಗೆ ನಮ್ಮಂತಹ ಮಾನವ ಸತ್ತೆಗಳಷ್ಟೇ ಪಾತ್ರರಾಗಿರಲಿಲ್ಲ, ಆದರೆ, ಚಿಕ್ಕ, ದೊಡ್ಡ ಹೀಗೆ ಎಲ್ಲ ಸತ್ತೆಗಳಿಗೆ ಅವರ ವಿಶ್ವಕ್ಕಿಂತ ವಿಶಾಲವಾದ ಹೃದಯದಲ್ಲಿ ಪ್ರೀತಿಗೆ ಸ್ಥಾನವಿತ್ತು.



ನಾವು ನಿಜವಾಗಿ ಪುಣ್ಯವಂತರು ಮತ್ತು ವಿಶ್ವದ ಪ್ರಭುವಿನ ಜೀವಂತ ದೇಹವನ್ನು ಹೊಂದಿದ ದೈವೀ ಗುರುವಾದ ಶ್ರೀ ಅರವಿಂದರನ್ನು ಹೊಂದಿರುವ ಪೃಥ್ವಿ ಪವಿತ್ರವಾದದ್ದಾಗಿದೆ. ಅವರು ತಮ್ಮ ಉಚ್ಚ ಶಿಖರಗಳಿಂದ ನಮ್ಮತ್ತ ವಾಲಿಕೊಂಡು ತಮ್ಮ ಪ್ರೇಮಮಯ ಹೃದಯದ ಆಳಗಳಲ್ಲಿ ನಮಗೆ ವಾಸಸ್ಥಳ ಕಲ್ಪಿಸಿಕೊಟ್ಟಿದ್ದಾರೆ.

**(ಪೂಜಾಲಾಲ ಅವರ ಸ್ಮೃತಿಗಳು)**

*

ಡಿ. 8, 1950 ರಂದು ಶ್ರೀ ಅರವಿಂದರಿಗೆ ನಿಮ್ಮ ದೇಹವನ್ನು ಪುನರುಜ್ಜೀವನಗೊಳಿಸಿರೆಂದು ಕೇಳಿದಾಗ ಅವರು: "ನಾನು ಈ ದೇಹವನ್ನು ಉದ್ದೇಶಪೂರ್ವಕವಾಗಿ ತ್ಯಜಿಸಿದ್ದೇನೆ, ಅದನ್ನು ನಾನು ಮತ್ತೆ ತೆಗೆದುಕೊಳ್ಳುವುದಿಲ್ಲ. ಅತಿಮಾನಸ ರೀತಿಯಲ್ಲಿ ನಿರ್ಮಾಣಗೊಂಡ ಮೊದಲ ಅತಿಮಾನಸ ದೇಹದಲ್ಲಿ ಪ್ರಕಟನಾಗುತ್ತೇನೆ" ಎಂದು ಅವರು ಸ್ಪಷ್ಟವಾಗಿ ಹೇಳಿದರು.

**(CWM, 13/9)** **– ಶ್ರೀಮಾತೆ**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 12ನೇ ಜುಲೈ 2015ರ ಭಾನುವಾರದಂದು ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ಮತ್ತು ಸಾಯಂಕಾಲ 5.00 ರಿಂದ 6.30 ರವರೆಗೆ "Yoga of Psychic Opening - I & II" ಡಾ॥ ನಂದಕುಮಾರ್ ವಿ. ವೇಲು, ಶ್ರೀ ಅರವಿಂದೋ ಸೊಸೈಟಿ, ತಿರುಚಿ ಕೇಂದ್ರ ಇವರಿಂದ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 21ನೇ ಜೂನ್ 2015ರ ಭಾನುವಾರದಂದು ಅಂತರರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10 ಗಂಟೆಯಿಂದ

10.20 ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ನಂತರ 10.30 ರಿಂದ 10.50 ರವರೆಗೆ ಯೋಗ ಗುರುಗಳಾದ ಡಾ॥ ರವಿಪ್ರಕಾಶ್‌ರವರಿಂದ ತರಬೇತಿ ಪಡೆದ ಪುರುಷ ಹಾಗೂ ಮಹಿಳಾ ಯೋಗ ಪಟುಗಳು ಯೋಗ ಪ್ರದರ್ಶನವನ್ನು ನಡೆಸಿಕೊಟ್ಟರು. ತತ್ಸಂಬಂಧ 11 ಗಂಟೆಯಿಂದ 12 ಗಂಟೆಯ ವರೆಗೆ ಡಾ॥ ವಿನಯಚಂದ್ರ ಬಿ.ಕೆ. ಬೆಂಗಳೂರು ಇವರಿಂದ "The Synthesis of Yoga" ಎಂಬುದರ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಉಪಸ್ಥಿತರಿದ್ದರು.

ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಮತ್ತು ವಿಶ್ವ ಸಂಗೀತ ದಿನಗಳನ್ನು ಆಚರಿಸಲಾಯಿತು. ವಿದ್ಯಾರ್ಥಿಗಳು ಯೋಗ ಮತ್ತು ಸಂಗೀತದಲ್ಲಿ ತಮ್ಮ ಪ್ರೌಢಿಮೆಯನ್ನು ಸಾದರ ಪಡಿಸಿದರು.

## ಶ್ರೀ ಅರವಿಂದೋ ಸೊಸೈಟಿ ಕೇಂದ್ರ, ಮಕರಬ್ಬಿ


ಶ್ರೀಮಾತಾರವಿಂದ ಸೇವಾ ಸಂಘ, ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕು ಮಕರಬ್ಬಿ ಎಂಬ ಪುಟ್ಟ ಗ್ರಾಮದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಶ್ರೀ ಅರವಿಂದ ಸಾಧನಾ ಕೇಂದ್ರದ ವತಿಯಿಂದ ದಿನಾಂಕ 21ನೇ ಜೂನ್ 2015 ಮುಂಜಾನೆ 9 ರಿಂದ 11 ಗಂಟೆಯವರೆಗೆ ನಡೆಸಲಾಯಿತು. ಯೋಗ ಗುರುಗಳಾದ ಶ್ರೀ ಫಕ್ಕೀರ ಗೌಡ ಇವರಿಂದ ಯೋಗದ ಮಹತ್ವಗಳಾದ ಪ್ರಾಣಾಯಾಮ, ಆಸನಗಳು, ಧ್ಯಾನ ಮತ್ತು ಶ್ರೀ ಅರವಿಂದರ "ಜೀವನವೆಲ್ಲಾ ಯೋಗ" ಇವುಗಳ ಬಗೆಗೆ ವಿವರಿಸಲಾಯಿತು.

ಈ ಮಹತ್ವದ ಕಾರ್ಯಕ್ರಮಕ್ಕೆ ಶ್ರೀ ಅರವಿಂದೋ ಕೇಂದ್ರದ ಸದಸ್ಯರಾದ ಸರ್ವಶ್ರೀ ಚೆನ್ನವೀರಗೌಡ, ಬಸವರಾಜ, ಗೋಣೆಪ್ಪ, ಭರಮಪ್ಪ, ಶಿವನ ಗೌಡ ಮುಂತಾದವರಲ್ಲದೆ ಅನೇಕ ಶಾಲಾ ಮಕ್ಕಳೂ ಭಾಗವಹಿಸಿದ್ದರು. ಮಕ್ಕಳಿಗೆ ಸಿಹಿ ಹಂಚಲಾಯಿತು.



## – ವಿಶೇಷ ಸೂಚನೆ –

1. ಗ್ರಾಮೀಣ ಭಾಗದ ಸದಸ್ಯರು ಒಂದೇ ಬಾರಿ ರೂ. 600/– ಪಾವತಿ ಮಾಡಿದಲ್ಲಿ ಅಂತಹ ಸದಸ್ಯರುಗಳಿಗೆ ಶ್ರೀ ಅರವಿಂದೋ ಸೊಸೈಟಿ 'O' ವರ್ಗ ಸದಸ್ಯತ್ವವನ್ನು ಹಾಗೂ ಇಳಿಸಿದ ದರದಲ್ಲಿ 5 ವರ್ಷಗಳ ಕಾಲ ಅಖಿಲ ಭಾರತ ಪತ್ರಿಕೆಯನ್ನು ಅಂಚೆ ಮುಖಾಂತರ ಕಳುಹಿಸಿಕೊಡಲಾಗುವುದು.
2. ದಿನಾಂಕ 1–6–2015 ರಿಂದ 6 ತಿಂಗಳ ಕಾಲ ಈ ಸದಸ್ಯತ್ವಕ್ಕೆ ನೊಂದಾವಣಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.



*Beauty is his footprint*
*showing us where he has passed...*

- Sri Aurobindo

**RNI No. 22511/1971**
No. of Pages **48 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.